YENEPOYA
(DEEMED TO BE UNIVERSITY)
Recognized under Sec 3(A) of the UGC Act 1956
Accredited by NAAC with 'A' Grade

3.7.1 Average number of collaborative activities for research, faculty exchange, student exchange/industry internship etc per year.

# Any Other Related Document

| Sl. No. | Particulars | Page Number |
|---|---|---|
| 1. | Paper clippings of different newspapers | 02 - 32 |

ATTESTED
Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018

APPEARED IN" DECCAN HERALD" 22-03-2019

# Yenepoya signs MoU with Republic of Ghana



Dr Anthony Nsiah-Asare, director general of Ghana Health Service, and Dr M Vijayakumar, Vice Chancellor of Yenepoya (Deemed to be) University, signed an MoU on strengthening the health services and education at the High Commission, Republic of Ghana, New Delhi, recently.

MANGALURU: Yenepoya (Deemed to be) University and Directorate of Health Service, Republic of Ghana, signed an MoU (Memorandum of Understanding) on extending health services and strengthening education, skill development areas in the two countries.

Director General of Ghana Health Service Dr Anthony Nsiah-Asare and Vice Chancellor of Yenepoya (Deemed to be University) Dr M Vijayakumar signed the MoU at the High Commission, Republic of Ghana, New Delhi.

Vice President of the Republic of Ghana Mahamudu Bawumia, who was in New Delhi, as a special guest of honour at the 14th CII Exim Bank conclave on the India-Africa Partnership project, was present during the exchange of the MoU.

The High Commissioner to India Michael Nii Nortey Oquaye and Eddison Mensah Agbenyegah, Head of Chancery, High Commission of Republic of Ghana and Dr Arun Bhagwath, Yenepoya (Deemed to be) University, witnessed the signing of the MoU.

The second lady of Ghana Samira Bawumia, Ministers from the Republic of Ghana, high commissioners and heads of other African countries were present on the occasion.

## Training

The memorandum of understanding also envisages training of doctors in advanced fellowships in super/subspecialties, capacity building and skill training through Health technology programmes, medical tourism, free paediatric care, faculty and student exchange in health and allied sectors, and establishment of joint centres for excellence in research and training at Ghana, establishment of incubation, and entrepreneurship development centres.

Yenepoya (Deemed to be) University Pro Chancellor Farhaad Yenepoya and other personalities were awarded excellence in health care services by Ghana high commission and NCR Chapter Global Organisation of People of Indian Origin (GOPIO).

DH News Service

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN "UDAYAVANI" 22-03-2019

ಶಿಕ್ಷಣ - ಆರೋಗ್ಯ ವಿಸ್ತರಣೆ

# ಯೇನಪೊಯ ವಿ.ವಿ.- ಘಾನಾ ಗಣರಾಜ್ಯ ಒಪ್ಪಂದ

ಮಂಗಳೂರು, ಮಾ. 21: ಯೇನಪೊಯ ವಿಶ್ವವಿದ್ಯಾನಿಲಯ ಮತ್ತು ಘಾನಾ ಗಣರಾಜ್ಯವು ಶಿಕ್ಷಣ ಮತ್ತು ಕೌಶಲ ಅಭಿವೃದ್ಧಿ, ಶೈಕ್ಷಣಿಕ ಸಹಕಾರ, ಆರೋಗ್ಯ ಸೇವೆಗಳ ವಿಸ್ತರಣೆ ಹಾಗೂ ಆರೋಗ್ಯದ ವಿಷಯದಲ್ಲಿ ಎರಡು ಕೌಂಟಿಗಳ ನಡುವಿನ ಸಂಬಂಧವನ್ನು ಬಲಪಡಿಸುವ ನಿಟ್ಟಿನಲ್ಲಿ ಒಪ್ಪಂದ ಮಾಡಿಕೊಂಡಿವೆ.



ಯೇನಪೊಯ ವಿ.ವಿ ಮತ್ತು ಘಾನಾ ಗಣರಾಜ್ಯ ನಡುವಿನ ಒಡಂಬಡಿಕೆಗೆ ಸಹಿ ಹಾಕಲಾಯಿತು.

ಹೊಸದಿಲ್ಲಿಯ ಘಾನಾ ಗಣರಾಜ್ಯದ ಹೈ ಕಮಿಷನ್ ಕಚೇರಿಯಲ್ಲಿ ನಡೆದ 14ನೇ ಸಿಐಐ ಎಕ್ಸಿಮ್ ಬ್ಯಾಂಕಿನ ಭಾರತ ಮತ್ತು ಆಫ್ರಿಕಾ ನಡುವಿನ ಪಾಲುದಾರಿಕೆ ಯೋಜನಾ ಸಮಾವೇಶದಲ್ಲಿ ಘಾನಾ ಆರೋಗ್ಯ ಸೇವೆಯ ಪ್ರಧಾನ ನಿರ್ದೇಶಕ ಡಾ| ಆಂಟೋನಿ ನಿಸಿಯಾ ಅಸಾರೆ ಹಾಗೂ ಯೇನಪೊಯ ಕುಲಪತಿ ಡಾ| ಎಂ. ವಿಜಯ್ ಕುಮಾರ್ ಅವರು ತಿಳುವಳಿಕೆ ಪತ್ರಕ್ಕೆ ಸಹಿ ಹಾಕಿದರು.

ಘಾನಾ ಗಣರಾಜ್ಯದ ಉಪಾಧ್ಯಕ್ಷ ಮಹಾಮುಡು ಬಾವುಮಿಯಾರ ಹಾಗೂ ಸಮೀರಾ ಬಾವುಮಿಯಾ, ಘಾನಾ ಗಣರಾಜ್ಯದ ಭಾರತೀಯ ಹೈಕಮಿಷನರ್ ಮಿಚೆಲ್ ನಿಯಿನಾರ್ಟಿ ಒಕ್ವಾಯೆ, ಎಡಿಸನ್ ಮೆನ್ಸಾ ಅಗ್ಬೆನೆಗ್ಗಾ ಮತ್ತು ಯೇನಪೋಯದ ಡಾ| ಅರುಣ್ ಭಾಗವತ್ ಮೊದಲಾದವರು ಉಪಸ್ಥಿತರಿದ್ದರು.

ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆ, ಆರೋಗ್ಯ ಸೇವೆ ಮತ್ತು ಕೌಶಲ ಅಭಿವೃದ್ಧಿಗಳಲ್ಲಿ ದ್ವಿಪಕ್ಷೀಯ ಸಹಕಾರವನ್ನು ಹೆಚ್ಚಿಸುವುದು ಈ ಒಪ್ಪಂದದ ಉದ್ದೇಶ. ಆರೋಗ್ಯ ಮತ್ತು ತಾಂತ್ರಿಕ ಕ್ಷೇತ್ರಗಳ ಮೂಲಕ ವೈದ್ಯಕೀಯ ಸಾಮರ್ಥ್ಯ, ವೈದ್ಯಕೀಯ ಪ್ರವಾಸೋದ್ಯಮ, ಉಚಿತ ಶಿಶು ವೈದ್ಯಕೀಯ ಆರೈಕೆ, ಅಧ್ಯಾಪಕ ಹಾಗೂ ವಿದ್ಯಾರ್ಥಿಗಳ ವಿನಿಮಯ ಮತ್ತು ಉತ್ಕೃಷ್ಟತೆಗಾಗಿ ಜಂಟಿ ಕೇಂದ್ರಗಳ ಸ್ಥಾಪನೆ, ಘಾನಾದಲ್ಲಿ ಸಂಶೋಧನೆ ಮತ್ತು ತರಬೇತಿ ಕೇಂದ್ರ ಸ್ಥಾಪನೆ, ವೈದ್ಯಕೀಯ ತಂತ್ರಜ್ಞಾನ ಮತ್ತು ಉದ್ಯಮಶೀಲತೆ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸುವುದು ಇದರಲ್ಲಿ ಒಳಗೊಂಡಿದೆ.

ಯೇನಪೊಯ ವಿ.ವಿ. ಸಹಾಯಕ ಕುಲಪತಿ ಫರ್ಹಾದ್ ಯೇನಪೊಯ ಅವರಿಗೆ ಆರೋಗ್ಯ ಕ್ಷೇತ್ರದಲ್ಲಿ ಸಾಧನೆ ಗೌರವಿಸಿ ಪ್ರಶಸ್ತಿ ನೀಡಲಾಯಿತು.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN"VIJAYAVANI" 22-03-2019

# ಯೇನೆಪೋಯ ಘಾನಾ ಗಣರಾಜ್ಯ ಒಪ್ಪಂದ

ಮಂಗಳೂರು: ಯೇನೆಪೋಯ ಡೀಮ್ಡ್ ವಿವಿ ಮತ್ತು ಘಾನಾ ಗಣರಾಜ್ಯ ಶಿಕ್ಷಣ ಮತ್ತು ಕೌಶಲ ಅಭಿವೃದ್ಧಿ, ಶೈಕ್ಷಣಿಕ ಸಹಕಾರ, ಆರೋಗ್ಯ ಸೇವೆ ವಿಸ್ತರಣೆ ಮತ್ತು ಆರೋಗ್ಯದ ವಿಷಯದಲ್ಲಿ ಸಂಬಂಧ ಸುಧಾರಣೆಗಾಗಿ ಒಪ್ಪಂದ ಮಾಡಿಕೊಂಡಿವೆ.

» ಶಿಕ್ಷಣ, ಕೌಶಲಾಭಿವೃದ್ಧಿ, ಶೈಕ್ಷಣಿಕ ಸಹಕಾರ, ಆರೋಗ್ಯ ಸೇವೆ ವಿಸ್ತರಣೆ ಉದ್ದೇಶ

ಘಾನಾ ಆರೋಗ್ಯ ಸೇವೆ ಪ್ರಧಾನ ನಿರ್ದೇಶನ ಡಾ. ಆಂಟೋನಿ ನಿಸಿಯಾ ಅಸಾರೆ ಮತ್ತು ಯೇನೆಪೋಯ ವಿವಿ ಕುಲಪತಿ ಡಾ.ಎಂ. ವಿಜಯ ಕುಮಾರ್ ನವದೆಹಲಿಯ ಘಾನಾ ಗಣರಾಜ್ಯದ ಹೈ ಕಮಿಷನ್ ಕಚೇರಿಯಲ್ಲಿ ಒಪ್ಪಂದಕ್ಕೆ ಸಹಿ ಹಾಕಿದರು.

ಘಾನಾ ಗಣರಾಜ್ಯ ಉಪಾಧ್ಯಕ್ಷ ಮಹಾಮುಡು ಬಾವುಮಿಯಾ, ಸಮಿರಾ ಬಾವುಮಿಯಾ, ಘಾನಾ ಗಣರಾಜ್ಯ ಮತ್ತು ನಿಯೋಗದ ಹಲವಾರು ಮಂತ್ರಿಗಳು, ಹೈ ಕಮೀಷನರ್‌ಗಳು ಮತ್ತು ಇತರ ಆಫ್ರಿಕನ್ ದೇಶಗಳ ಮುಖ್ಯಸ್ಥರು ಉಪಸ್ಥಿತರಿದ್ದರು. ಘಾನಾ ಗಣರಾಜ್ಯದ ಭಾರತೀಯ ಹೈಕಮಿಷನರ್ ಶ್ರೀ ಮಿಚೆಲ್ ನಿಯಿ ನಾರ್ಟೆ ಒಕ್ವಾಯೆ ಹಾಗೂ ಎಡಿಸನ್ ಮೆನ್ಸಾ ಅಗ್ಬೆನೆಗ್ಗಾ ಮತ್ತು ಯೇನೆಪೋಯದ ಡಾ.ಅರುಣ್ ಭಾಗವತ್ ಹಾಜರಿದ್ದರು. ಕಾರ್ಯಕ್ರಮದ ಭಾಗವಾಗಿ ಘಾನಾ ಹೈ ಕಮಿಷನ್ ದೆಹಲಿ ಘಟಕದಿಂದ ನೀಡುವ ಪ್ರಶಸ್ತಿಗಳಲ್ಲಿ ಆರೋಗ್ಯ ಸೇವೆಗೆ ಯೇನೆಪೋಯದ ಸಹಾಯಕ ಕುಲಪತಿ ಫರ್ಹಾದ್ ಯೇನೆಪೋಯ ಅವರಿಗೆ ಪ್ರಶಸ್ತಿ ನೀಡಲಾಯಿತು.



ಘಾನಾ ಆರೋಗ್ಯ ಸೇವೆ ಪ್ರಧಾನ ನಿರ್ದೇಶನ ಡಾ. ಆಂಟೋನಿ ನಿಸಿಯಾ ಅಸಾರೆ ಮತ್ತು ಯೇನೆಪೋಯ ವಿವಿ ಕುಲಪತಿ ಡಾ.ಎಂ. ವಿಜಯ ಕುಮಾರ್ ಒಪ್ಪಂದ ಮಾಡಿಕೊಂಡರು.

## ದ್ವಿಪಕ್ಷೀಯ ಸಹಕಾರ ಹೆಚ್ಚಳ ಉದ್ದೇಶ

ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆ, ಆರೋಗ್ಯ ಸೇವೆ ಮತ್ತು ಕೌಶಲ ಅಭಿವೃದ್ಧಿಗಳಲ್ಲಿ ದ್ವಿಪಕ್ಷೀಯ ಸಹಕಾರ ಹೆಚ್ಚಿಸುವುದು ಈ ಒಪ್ಪಂದದ ಉದ್ದೇಶ. ಆರೋಗ್ಯ ಮತ್ತು ತಾಂತ್ರಿಕ ಕ್ಷೇತ್ರಗಳ ಮೂಲಕ ವೈದ್ಯಕೀಯ ಸಾಮರ್ಥ್ಯ, ವೈದ್ಯಕೀಯ ಪ್ರವಾಸೋದ್ಯಮ, ಉಚಿತ ಶಿಶು ವೈದ್ಯಕೀಯ ಆರೈಕೆ, ಅಧ್ಯಾಪಕ ಹಾಗೂ ವಿದ್ಯಾರ್ಥಿಗಳ ವಿನಿಮಯ, ಮತ್ತು ಉತ್ಕೃಷ್ಟತೆಗಾಗಿ ಜಂಟಿ ಕೇಂದ್ರಗಳ ಸ್ಥಾಪನೆ, ಘಾನಾದಲ್ಲಿ ಸಂಶೋಧನೆ ಮತ್ತು ತರಬೇತಿ ಕೇಂದ್ರ ಸ್ಥಾಪನೆ, ವೈದ್ಯಕೀಯ ತಂತ್ರಜ್ಞಾನ ಮತ್ತು ಉದ್ಯಮಶೀಲತೆ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸುವುದು ಕೂಡ ಉದ್ದೇಶವಾಗಿದೆ.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN "THE TIMES OF INDIA" 22-03-2019

# MoU inked

Mangaluru: The Yenepoya (deemed to be university) and directorate of health service, Republic of Ghana, have signed an MoU, recently.

The MoU was signed for the purpose of educational cooperation, extending health services and strengthening of relationship between the two countries in terms of health, education and skill development.


Dr Anthony Nsiah-Asare, director general of Ghana Health Service and Dr M Vijayakumar, vice-chancellor of Yenepoya (deemed to be university), Mangaluru, signed the MoU at the High Commission, Republic of Ghana, New Delhi. TNN

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

**APPEARED IN "UDAYAVANI" 31-03-2019**

# ಯೇನಪೊಯ ದಂತ ವೈದ್ಯ ಕಾಲೇಜು- ಕ್ವೀನ್ಸ್‌ಲ್ಯಾಂಡ್ ವಿ.ವಿ. ಒಪ್ಪಂದಕ್ಕೆ ಸಹಿ




ಉಳ್ಳಾಲ, ಮಾ. 30: ದೇರಳಕಟ್ಟೆಯ ಯೇನಪೊಯ (ಪರಿಗಣಿತ) ವಿ.ವಿ.ಯ ಯೇನಪೊಯ ದಂತ ವೈದ್ಯಕೀಯ ಕಾಲೇಜು ಮತ್ತು ಆಸ್ಟ್ರೇಲಿಯದ ಕ್ವೀನ್ಸ್ ಲ್ಯಾಂಡ್ ವಿ.ವಿ.ಯ ಬ್ರಿಸ್‌ಬೇನ್ ದಂತ ಕಾಲೇಜ್‌ನೊಂದಿಗೆ ಶೈಕ್ಷಣಿಕ ಮತ್ತು ಸಂಶೋಧನ ಒಡಂಬಡಿಕೆಗೆ ಯೇನಪೊಯ ವಿ.ವಿ. ಕ್ಯಾಂಪಸ್‌ನ ಯೇನಪೊಯ ದಂತ ಕಾಲೇಜು ಆಡಿಟೋರಿಯಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಹಿ ಹಾಕಲಾಯಿತು.

ಕ್ವೀನ್ಸ್‌ಲ್ಯಾಂಡ್ ವಿಶ್ವವಿದ್ಯಾನಿಲಯದ ದಂತ ವಿಭಾಗದ ಮುಖ್ಯಸ್ಥೆ ಪ್ರೊ| ಪೌಲೀನ್ ಫೋರ್ಡ್ ಒಪ್ಪಂದಕ್ಕೆ ಸಹಿ ಹಾಕಿ ಯೇನಪೊಯ ಸಂಸ್ಥೆಯ ಜತೆಗಿನ ಒಪ್ಪಂದದಿಂದ ಸಂಶೋಧನ ವಿದ್ಯಾರ್ಥಿಗಳಿಗೆ ಮತ್ತು ಯುವ ವೈದ್ಯರಲ್ಲಿ ಕೌಶಲ ವೃದ್ಧಿಸಲು ಸಹಕಾರಿಯಾಗಲಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಯೇನಪೊಯ ವಿ.ವಿ. ಕುಲಾಧಿಪತಿ ಯೇನಪೊಯ ಅಬ್ದುಲ್ಲಾ ಕುಂಞಿ ಮಾತನಾಡಿ, ಯೇನಪೊಯ ಸಂಸ್ಥೆಯ ಸಿಬಂದಿ ಹಾಗೂ ವಿದ್ಯಾರ್ಥಿಗಳು ಜ್ಞಾನ ವೃದ್ಧಿಸುವುದರ ಜತೆಗೆ ತಮ್ಮ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳಲು ಸಾಧ್ಯ ಎಂದರು.

ಕುಲಸಚಿವ ಡಾ| ಗಂಗಾಧರ ಸೋಮಯಾಜಿ ಒಪ್ಪಂದಕ್ಕೆ ಸಹಿ ಹಾಕಿದರು. ಅಬ್ದುಲ್ಲಾಕುಂಞಿ ಅವರಿಗೆ ಪ್ರೊ| ಪೌಲೀನ್ ಫೋರ್ಡ್ ಒಪ್ಪಂದದ ಪ್ರತಿ ಹಸ್ತಾಂತರಿಸಿದರು. ಕುಲಪತಿ ಡಾ| ಎಂ. ವಿಜಯಕುಮಾರ್, ಉಪಕುಲಪತಿ ಡಾ| ಸಿ.ವಿ. ರಘುವೀರ್, ಡಾ| ಅಖ್ತರ್ ಹುಸೈನ್ ಉಪಸ್ಥಿತರಿದ್ದರು. ಡೀನ್ ಡಾ| ಬಿ. ಎಚ್. ಶ್ರೀಪತಿ ರಾವ್ ಸ್ವಾಗತಿಸಿದರು. ಡಾ| ಅರುಣ್ ಭಾಗವತ್ ಒಪ್ಪಂದದ ಮಹತ್ವ ತಿಳಿಸಿದರು. ಉಪಪ್ರಾಂಶುಪಾಲ ಡಾ| ಶ್ಯಾಂ ಎಸ್. ಭಟ್ ವಂದಿಸಿದರು. ವರ್ಷ ನಿರ್ವಹಿಸಿದರು.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte

**APPEARD IN VARTHA BHARATI DTD ON 19-06-2019**

# ಘಾನಾ ಜೊತೆ ತಿಳುವಳಿಕಾ ಒಪ್ಪಂದಕ್ಕೆ ಯೆನೆಪೊಯ ವಿವಿ ಸಹಿ

ಮಂಗಳೂರು, ಜೂ.18: ದೇರಳಕಟ್ಟೆಯಲ್ಲಿರುವ ಯೆನೆಪೊಯ ವಿಶ್ವವಿದ್ಯಾನಿಲಯವು ಘಾನಾ-ಭಾರತದ ಟ್ರೇಡ್ ಅಡ್ವೈಸರಿ ಛೇಂಬರ್, ಪೆಂಟ್‌ಕೋಸ್ಟ್ ವಿಶ್ವವಿದ್ಯಾನಿಲಯ ಕಾಲೇಜು, ಸೈಂಟ್ ಆಲ್ಬರ್ಟ್ಸ್ ವೈದ್ಯಕೀಯ ಮತ್ತು ಆರೋಗ್ಯ ವಿಜ್ಞಾನ ಕಾಲೇಜು ಜೊತೆ ತಿಳುವಳಿಕೆಯ ಒಪ್ಪಂದಕ್ಕೆ ಸಹಿ ಹಾಕಿದೆ.

ಯೆನೆಪೊಯ ವಿವಿ ಮತ್ತು ಘಾನಾ-ಭಾರತದ ಟ್ರೇಡ್ ಅಡ್ವೈಸರಿ ಛೇಂಬರ್, ಪೆಂಟ್‌ಕೋಸ್ಟ್ ವಿವಿಯ ರೆಕ್ಟರ್ ರವರೊ ಪಗೋಡಿ ಅವರು ಜೂ.17ರಂದು ಶೈಕ್ಷಣಿಕ ಸಹಕಾರ, ಆರೋಗ್ಯ ಸೇವೆಗಳನ್ನು ವಿಸ್ತರಿಸುವುದು ಮತ್ತು ಆರೋಗ್ಯ, ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿಯ ವಿಷಯದಲ್ಲಿ ಸಂಬಂಧವನ್ನು ಬಲಪಡಿಸುವ ಸಲುವಾಗಿ ತಿಳುವಳಿಕೆಯ ಒಪ್ಪಂದಕ್ಕೆ ಸಹಿ ಹಾಕಿದರು.



ಈ ಸಂದರ್ಭ ಯೆನೆಪೊಯ ವಿವಿಯ ಕುಲಪತಿ ಯೆನೆಪೊಯ ಅಬ್ದುಲ್ಲ ಕುಂಞಿ, ಉಪಕುಲಪತಿ ಡಾ.ಎಂ.ವಿಜಯಕುಮಾರ್, ಯೆನೆಪೊಯ ವಿವಿಯ ಇತರ ಅಧಿಕಾರಿಗಳು, ಘಾನಾ ಇಂಡಿಯಾ ಟ್ರೇಡ್ ಅಡ್ವೈಸರಿ ಛೇಂಬರ್ ಅಧ್ಯಕ್ಷ ಡೊಮಿನಿಕ್ ಒದುರೋ-ಅಂಟ್ವಿ, ಘಾನಾ ಗಣರಾಜ್ಯದ ನೆಯೂತಾ ಟ್ವುಮ್ ಬಾರಿಮಾ, ಪೆಂಟ್‌ಕೋಸ್ಟ್ ವಿವಿ ಕಾಲೇಜಿನ ಅಪೋಸ್ಟಲ್ ಡೇನಿಯಲ್ ವಾಕರ್, ಪಶ್ಚಿಮ ಆಫ್ರಿಕಾದ ಬೆಳೆ ಸಂಶೋಧನಾ ಕೇಂದ್ರದ ನಾಯಕಿಯಾದ ಜೆನ್ನಿ ಸೈಂಟೆ, ಪೆಂಟ್‌ಕೋಸ್ಟ್ ವಿವಿ ಕಾಲೇಜಿನ ಗ್ರಂಥಾಲಯದ ಮುಖ್ಯಸ್ಥ ಮೈಕೆಲ್ ಗೈಮಾ, ಹೊಸದಿಲ್ಲಿಯ ಎನ್‌ಸಿಆರ್ ಅಧ್ಯಾಯದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಿಭಾಗದ ಕಾರ್ಯನಿರ್ವಾಹಕ ಮುಖ್ಯ ಹಾಗೂ ಮಾನವ ಸಾಧಕ ಫೌಂಡೇಶನ್ ಸ್ಥಾಪಕ ಅಧ್ಯಕ್ಷ ಡಾ.ಸೆನೊರಿಟಾ ಇಸಾಕ ಉಪಸ್ಥಿತರಿದ್ದರು.

ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆ ಆರೋಗ್ಯ, ಸೇವೆ ಮತ್ತು ಕೌಶಲ ಅಭಿವೃದ್ಧಿಯಲ್ಲಿ ದ್ವಿಪಕ್ಷೀಯ ಸಹಕಾರವನ ಹೆಚ್ಚಿಸುವುದು ಈ ಒಪ್ಪಂದದ ಉದ್ದೇ ವಾಗಿದೆ. ಆರೋಗ್ಯ ಮತ್ತು ತಾಂತ್ರಿ ಕ್ಷೇತ್ರಗಳ ಮೂಲಕ ವೈದ್ಯಕೀಯ ಸಾಮರ್ಥ್ಯ ವೈದ್ಯಕೀಯ ಪ್ರವಾಸೋದ್ಯಮ, ಉಚಿತ ಶಿ ವೈದ್ಯಕೀಯ ಆರೈಕೆ, ಅಧ್ಯಾಪಕ-ವಿದ್ಯಾರ್ಥಿ ವಿನಿಮಯ ಹಾಗೂ ಉತ್ಕೃಷ್ಟತೆಗಾಗಿ ಜಂ ಕೇಂದ್ರಗಳ ಸ್ಥಾಪನೆ, ಘಾನದಲ್ಲಿ ಸಂಶೋಧ ಮತ್ತು ತರಬೇತಿ ಕೇಂದ್ರ ಸ್ಥಾಪನೆ, ವೈದ್ಯಕೀಯ ತಂತ್ರಜ್ಞಾನ ಮತ್ತು ಉದ್ಯಮಶೀಲ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸುವುದು ಈ ತಿಳುವಳಿಕೆಯ ಒಪ್ಪಂದದ ಆಶಯವಾಗಿ ಎಂದು ಯೆನೆಪೊಯ ವಿವಿಯ ಪ್ರಕಟ ತಿಳಿಸಿದೆ.

Page No. 2 Jun 19, 2019
Powered by: erelego.com


ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN VIJAYAVANI DATED ON 27.07.19

# ಯೇನೆಪೋಯ- ಆಫ್ರಿಕಾದ ಮಲಾವಿ ನಡುವೆ ಒಪ್ಪಂದ

ವಿಜಯವಾಣಿ ಚಿತ್ರ



ಯೇನೆಪೋಯ ವಿವಿ- ಆಫ್ರಿಕಾದ ಮಲಾವಿ ನಡುವೆ ಒಪ್ಪಂದ ನಡೆಯಿತು. ಮಲಾವಿ ಗಣರಾಜ್ಯದ ಹೈ ಕಮಿಷನರ್ ಜಾರ್ಜ್ ಕ್ರೈಟೋನ್ ಎಂಕೊಂಡಿವಾ, ಯೇನೆಪೋಯ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಡಾ.ಗಂಗಾಧರ ಸೋಮಯಾಜಿ ಕೆ.ಎಸ್. ಮತ್ತಿತರರಿದ್ದರು.

ಉಳ್ಳಾಲ: ಶೈಕ್ಷಣಿಕ ಸಹಕಾರ, ಆರೋಗ್ಯ ಸೇವೆಗಳನ್ನು ವಿಸ್ತರಿಸುವುದು ಮತ್ತು ಆರೋಗ್ಯ, ಶಿಕ್ಷಣ ಹಾಗೂ ಕೌಶಲ ಅಭಿವೃದ್ಧಿ ವಿಷಯದಲ್ಲಿ ಉಭಯ ದೇಶಗಳ ನಡುವಿನ ಸಂಬಂಧ ಬಲಪಡಿಸುವ ಉದ್ದೇಶದಿಂದ ಯೇನೆಪೋಯ(ಡೀಮ್ಡ್) ವಿಶ್ವವಿದ್ಯಾಲಯ ಮತ್ತು ಆಫ್ರಿಕಾದ ಮಲಾವಿ ಗಣರಾಜ್ಯದೊಂದಿಗೆ ಒಡಂಬಡಿಕೆ ನಡೆಯಿತು.

ಮಲಾವಿ ಗಣರಾಜ್ಯದ ಹೈ. ಕಮಿಷನರ್ ಜಾರ್ಜ್ ಕ್ರೈಟೋನ್ ಎಂಕೊಂಡಿವಾ ಮತ್ತು ಯೇನೆಪೋಯ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಡಾ.ಗಂಗಾಧರ ಸೋಮಯಾಜಿ ಕೆ.ಎಸ್. ಅವರು ಮಲಾವಿಯಿಂದ ಯೇನೆಪೋಯ ವಿಶ್ವವಿದ್ಯಾಲಯಕ್ಕೆ ನಿಯೋಗ ಭೇಟಿ ನೀಡಿದ ಸಂದರ್ಭ ಎಂಒಯುಗೆ ಸಹಿ ಹಾಕಿದರು.

ಸಹಾಯಕ ಕುಲಪತಿ ಫರ್ಹಾದ್ ಯೇನೆಪೋಯ, ಗೌರವ ಉಪಕುಲಪತಿ ಡಾ.ಎಂ.ವಿಜಯಕುಮಾರ್, ಯೇನೆಪೋಯ ವೈದ್ಯಕೀಯ ಆಸ್ಪತ್ರೆ ಅಧೀಕ್ಷಕ ಡಾ.ಎಸ್.ಪದ್ಮನಾಭ ಮತ್ತು ಕ್ಯುಎಸಿಯ ಉಪ ನಿರ್ದೇಶಕ ಡಾ.ಅರುಣ್ ಭಾಗ್ವತ್, ವಿವಿಧ ವಿಭಾಗದ ಘಟಕಗಳ ಡೀನ್‌ಗಳು ಮತ್ತು ವಿಶ್ವವಿದ್ಯಾಲಯದ ಅಧಿಕಾರಿಗಳು ಉಪಸ್ಥಿತರಿದ್ದರು.

ATTESTED
Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN VIJAYAKARNATAKA DATED ON 27.07.19

# ಯೆನೆಪೋಯ ವಿವಿ-ಆಫ್ರಿಕಾದ ಮಲಾವಿ ಗಣರಾಜ್ಯ ಒಡಂಬಡಿಕೆ


■ ವಿಕ ಸುದ್ದಿಲೋಕ ತೊಕ್ಕೊಟ್ಟು

ಶೈಕ್ಷಣಿಕ ಸಹಕಾರ, ಆರೋಗ್ಯ ಸೇವೆಗಳನ್ನು ವಿಸ್ತರಿಸುವುದು ಮತ್ತು ಆರೋಗ್ಯ, ಶಿಕ್ಷಣ ಹಾಗೂ ಕೌಶಲ್ಯ ಅಭಿವೃದ್ಧಿಯ ವಿಷಯ ದಲ್ಲಿ ಉಭಯ ದೇಶಗಳ ನಡುವಿನ ಸಂಬಂಧವನ್ನು ಬಲಪಡಿಸುವ ಉದ್ದೇಶ ದಿಂದ ಯೆನೆಪೋಯ ಪರಿಗಣಿ ಸಲ್ಪಟ್ಟಿರುವ ವಿಶ್ವವಿದ್ಯಾಲಯ ಮತ್ತು ಮಲಾವಿಯ ಹೈಕಮಿಷನ್ 2019ರ ಜು.22ರಂದು ಒಪ್ಪಂದಕ್ಕೆ ಸಹಿ ಹಾಕಿದೆ.

ಮಲಾವಿ ಗಣರಾಜ್ಯದ ಹೈಕಮಿಷನ್ ಜಾರ್ಜ್‌ಕ್ಯೆಟೋನ್‌ಎಂಕೊಂಡಿವಾ ಮತ್ತು ಯೆನೆಪೋಯ ವಿವಿಯ ಕುಲಸಚಿವ ಡಾ. ಗಂಗಾಧರ ಸೋಮಯಾಜಿ ಎಸ್. ಅವರು ಮಲಾವಿ ವಿಶ್ವವಿದ್ಯಾಲಯಕ್ಕೆ ನಿಯೋಗದ ಭೇಟಿ ಸಂದರ್ಭದಲ್ಲಿ ಎಂಒಯುಗೆ ಸಹಿ ಹಾಕಿದರು.

ಸಹ ಕುಲಾಧಿಪತಿ ಫರ್ಹಾದ್ ಯೆನೆಪೋಯ, ಕುಲಪತಿ ಡಾ. ಎಂ. ವಿಜಯಕುಮಾರ್, . ಮಲಾವಿ ಹೈಕಮಿಷನ್‌ನ ಕೌನ್ಸಿಲರ್ಶ್ರೀ ಆಲ್‌ಫೆಡ್ವಲಿಲಿ, ಯೆನೆಪೋಯ ವಿವಿ ಸಹ ಕುಲಪತಿ ಡಾ. ಸಿ.ವಿ. ರಘುವೀರ್, ಯೆನೆಪೋಯ ವೈದ್ಯಕೀಯ ಕಾಲೇಜು ಆಸ್ಪತ್ರೆಯ ಅಧೀಕ್ಷಕ ಡಾ. ಎಸ್. ಪದ್ಮನಾಭ ಮತ್ತು ಯೆನೆಪೋಯ ಉಪ ನಿರ್ದೇಶಕ ಡಾ. ಅರುಣ್ ಭಾಗವತ್ ಹಾಗೂ ಘಟಕಗಳ ಡೀನ್‌ಗಳು ಮತ್ತು ವಿಶ್ವವಿದ್ಯಾಲಯದ ಅಧಿಕಾರಿಗಳು ಉಪಸ್ಥಿತರಿದ್ದರು.

ನಿಯೋಗದಲ್ಲಿ ಪೆಟ್ರೀಷಿಯಾ ಜಾರ್ಜ್ ಎಂ. ಕೊಂಡಿವಾ, ಒಡೆಥಾವಿಲಿಲಿ ಮತ್ತು ಮಹಿಳಾ ಹಾಗೂ ಮಕ್ಕಳ ಕಲ್ಯಾಣ ವಿಭಾಗದ ಕಾರ್ಯನಿರ್ವಾಹಕ ಮುಖ್ಯಸ್ಥ ಡಾ. ಸೆನೊರಿಟಾ ಇಸಾಕ್, ದಿಲ್ಲಿ ಎನ್ಸಿಆರ್ ಅಧ್ಯಾಯ ಹಾಗೂ ಮಾನವ ಸಾಧಕರ ಪ್ರತಿಷ್ಠಾನದ ಸ್ಥಾಪಕ ಅಧ್ಯಕ್ಷರು ಜತೆಗಿದ್ದರು.



ಯೆನೆಪೋಯ ಪರಿಗಣಿಸಲ್ಪಟ್ಟಿರುವ ವಿಶ್ವವಿದ್ಯಾಲಯ ಮತ್ತು ಮಲಾವಿಯ ಹೈಕಮಿಷನ್ 2019ರ ಜು.22ರಂದು ಒಪ್ಪಂದಕ್ಕೆ ಸಹಿ ಹಾಕಿದೆ.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN VIJAYAKARNATAKA 31-10-2019

# ಯೆನೆಪೊಯ ವಿವಿ-ಉಗಾಂಡಾ ಗಣರಾಜ್ಯದೊಂದಿಗೆ ಸಹಿ ಒಪ್ಪಂದ



ಮಂಗಳೂರು, ಅ. 30: ಯೆನೆಪೊಯ (ಪರಿಗಣಿಸಲ್ಪಟ್ಟ) ವಿವಿ ಮತ್ತು ಉಗಾಂಡಾದ ಹೈಕಮಿಷನರ್ ಒಪ್ಪಂದಕ್ಕೆ ಸಹಿ ಹಾಕಿದರು.

ಉಗಾಂಡಾದಿಂದ ಯೆನೆಪೊಯ ವಿವಿಗೆ ನಿಯೋಗದ ಭೇಟಿಯ ಸಂದರ್ಭದಲ್ಲಿ, ಎಚ್.ಇ.ಉಗಾಂಡಾ ಗಣರಾಜ್ಯದ ಹೈ ಕಮಿಷನರ್ ಮುಹಮ್ಮದ್ ಬಸ್ವಾರಿ ಬಟ್ವಾಗ್ಯೆನ್ ಕೆಜಾಲಾ ಮತ್ತು ವಿವಿ ಕುಲಪತಿ ವೈ.ಅಬ್ದುಲ್ಲ ಕುಂಞ್ ಸಮ್ಮುಖದಲ್ಲಿ ಉಸ್ತುವಾರಿ ಕುಲಸಚಿವ ಡಾ.ಬಿ.ಟಿ. ನಂದೀಶ್ ಒಪ್ಪಂದಕ್ಕೆ ಸಹಿ ಹಾಕಿದರು.

ಸಹಾಯಕ ಕುಲಪತಿ ಫರ್ಹಾದ್ ಯೆನೆಪೊಯ, ಗೌರವ ಉಪ ಕುಲಪತಿ ಡಾ.ಎಂ.ವಿಜಯಕುಮಾರ್, ಗೌರವ ಸಹಾಯಕ ಉಪ ಕುಲಪತಿ ಡಾ.ಸಿ.ವಿ.ರಘುವೀರ್, ಶೈಕ್ಷಣಿಕ ಸಲಹೆಗಾರ ಡಾ.ಅಬ್ದುರ್ರಹ್ಮಾನ್, ಕ್ಯುಎಸಿಯ ಉಪ ನಿರ್ದೇಶಕ ಡಾ.ಅರುಣ್ ಭಾಗವತ್, ಉಪ ನಿರ್ದೇಶಕ (ಕ್ಯುಎಸಿ) ಜೊತೆಗೆ ಘಟಕಗಳ ಡೀನ್‌ಗಳು ಹಾಗೂ ವಿವಿಯ ಅಧಿಕಾರಿಗಳು ಮತ್ತು ದೆಹಲಿಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಿಭಾಗದ ಕಾರ್ಯನಿರ್ವಾಹಕ ಮುಖ್ಯಸ್ಥೆ ಹಾಗೂ ಎನ್‌ಸಿಆರ್ ಅಧ್ಯಾಯ ಮತ್ತು ಮಾನವ ಸಾಧಕರ ಪ್ರತಿಷ್ಠಾನದ ಅಧ್ಯಕ್ಷೆ ಡಾ.ಸೆನೋರಿಟಾ ಐಸಾಕ್ ಉಪಸ್ಥಿತರಿದ್ದರು.


ಆರೋಗ್ಯ, ಶಿಕ್ಷಣ, ಕೌಶಲ್ಯ ಅಭಿವೃದ್ಧಿ, ಸಂಶೋಧನೆ ಮತ್ತು ಅಭಿವೃದ್ಧಿ ವಿಷಯದಲ್ಲಿ ಶೈಕ್ಷಣಿಕ ಸಹಕಾರ, ಆರೋಗ್ಯ ಸೇವೆಗಳನ್ನು ವಿಸ್ತರಿಸುವುದು ಮತ್ತು ಉಭಯ ದೇಶಗಳ ನಡುವಿನ ಸಂಬಂಧವನ್ನು ಬಲಪಡಿಸುವುದು ಈ ಒಪ್ಪಂದದ ಉದ್ದೇಶವಾಗಿದೆ ಎಂದು ಯೆನೆಪೊಯ ವಿವಿ ಪ್ರಕಟನೆ ತಿಳಿಸಿದೆ.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN VIJAYAVANI 27-10-2019

# ಘಾನಾ, ಉಗಾಂಡ ಜತೆ ಯೇನೆಪೋಯ ಒಪ್ಪಂದ



ಯೇನೆಪೋಯ ಹಾಗೂ ಉಗಾಂಡ ವಿವಿ ಜತೆ ಒಪ್ಪಂದ ಶನಿವಾರ ನಡೆಯಿತು. ಉಗಾಂಡ ಗಣರಾಜ್ಯದ ಹೈ ಕಮಿಷನರ್ ಮೊಹಮ್ಮದ್ ಬಸ್ವಾರಿ ಬಟ್ವಾಗೈನ್ ಕೆಜಾಲಾ, ಯೇನೆಪೋಯ ವಿಶ್ವವಿದ್ಯಾಲಯ ಕುಲಪತಿ ವೈ. ಅಬ್ದುಲ್ಲಾ ಕುಂಞಿ, ಉಸ್ತುವಾರಿ ಕುಲಸಚಿವ ಡಾ.ಬಿ.ಟಿ.ನಂದೀಶ್ ಮತ್ತಿತರರು ಉಪಸ್ಥಿತರಿದ್ದರು.

■ ವಿಜಯವಾಣಿ ಸುದ್ದಿಜಾಲ ಉಳ್ಳಾಲ

» ವೈದ್ಯಕೀಯ ಶಿಕ್ಷಣದಲ್ಲಿ ಪ್ರಾತಿನಿಧ್ಯ, ಶೈಕ್ಷಣಿಕ ಸಹಕಾರ ಉದ್ದೇಶ

ಘಾನಾ ಇಂಡಿಯಾ ಟ್ರೇಡ್ ಅಡ್ವೈಸರಿ ಛೇಂಬರ್, ಘಾನಾ ಸರ್ಕಾರ ಮತ್ತು ಉಗಾಂಡ ಗಣರಾಜ್ಯದೊಂದಿಗೆ ಯೇನೆಪೋಯ ಡೀಮ್ಡ್ ವಿಶ್ವವಿದ್ಯಾಲಯದ ಒಪ್ಪಂದ ಶನಿವಾರ ನಡೆಯಿತು.

ನಿಯೋಗದ ಭೇಟಿಯ ಡೆಪ್ಯುಟಿ ಮೆಜಾರಿಟಿ ಲೀಡರ್ ಸಾರ ಅಡ್ವೋವಾ ಸಪ್ರೊ, ಘಾನಾ- ಭಾರತದ ವ್ಯಾಪಾರ ಸಲಹಾ ಸಮಿತಿ ಅಧ್ಯಕ್ಷ ಡೊಮಿನಿಕ್ ಒಡುರೊ-ಆಂಟ್ವಿ, ಉಸ್ತುವಾರಿ ಕುಲಸಚಿವ ಡಾ.ಬಿ.ಟಿ.ನಂದೀಶ್, ಹ್ಯಾನಿ ಮೌಕ್ತಿಸೆಬ್, ಜಾನ್ ಕ್ವಾಡ್ವೋ ಅಯಿಅಹ್, ಡೇನಿಯಲ್ ಅಪಿಅಹ್ ಒಟ್ಟೊ, ಡಾಪ್ನೆ ಲಾರಿಬಾ ನಬಿಲಾ ಮತ್ತು ಸಹಾಯಕ ಉಪಕುಲಪತಿ ಡಾ.ಸಿ.ವಿ.ರಘುವೀರ್, ಯೇನೆಪೊಯ ವಿವಿ ಶೈಕ್ಷಣಿಕ ಸಲಹೆಗಾರ ಡಾ.ಅಬ್ದುಲ್ ರಹಿಮಾನ್, ಕ್ಯುಎಸಿ ಉಪನಿರ್ದೇಶಕ ಡಾ.ಅರುಣ್ ಭಾಗ್ವತ್, ವಿವಿಧ ಘಟಕಗಳ ಡೀನ್, ವಿಶ್ವವಿದ್ಯಾಲಯ ಅಧಿಕಾರಿಗಳು, ದೆಹಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಿಭಾಗ ಕಾರ್ಯನಿರ್ವಾಹಕ ಮುಖ್ಯಸ್ಥೆ ಡಾ. ಸೆನೋರಿಟಾ ಐಸಾಕ್ ಉಪಸ್ಥಿತರಿದ್ದರು.

ವೈದ್ಯಕೀಯ ಶಿಕ್ಷಣದಲ್ಲಿ ಪ್ರಾತಿನಿಧ್ಯ, ಶೈಕ್ಷಣಿಕ ಸಹಕಾರ, ಆರೋಗ್ಯ ಸೇವೆಗಳನ್ನು ವಿಸ್ತರಿಸುವುದು, ಆರೋಗ್ಯ ಶಿಕ್ಷಣ ಹಾಗೂ ಕೌಶಲ ಅಭಿವೃದ್ಧಿ, ವೈದ್ಯಕೀಯ ಪ್ರವಾಸೋದ್ಯಮ, ಸಂಶೋಧನೆ ಹಾಗೂ ಅಭಿವೃದ್ಧಿ, ವ್ಯವಹಾರ ಅಭಿವೃದ್ಧಿ ವಿಷಯಗಳಲ್ಲಿ ಯೇನೆಪೋಯ ವಿಶ್ವವಿದ್ಯಾಲಯ ಮತ್ತು ಘಾನಾದ ಸಂಸ್ಥೆಗಳ ನಡುವಿನ ಸಂಬಂಧ ಬಲಪಡಿಸುವ ಉದ್ದೇಶ ಒಪ್ಪಂದ ಹೊಂದಿದೆ. ಉಗಾಂಡದ ಹೈಕಮಿಷನರ್ ಜತೆ ನಡೆದ ಒಪ್ಪಂದ ಹಾಗೂ ಉಗಾಂಡ ವಿಶ್ವವಿದ್ಯಾಲಯಕ್ಕೆ ನಿಯೋಗ ಭೇಟಿ ಸಂದರ್ಭ ಉಗಾಂಡ ಗಣರಾಜ್ಯದ ಹೈ ಕಮಿಷನರ್ ಮೊಹಮ್ಮದ್ ಬಸ್ವಾರಿ ಬಟ್ವಾಗೈನ್ ಕೆಜಾಲಾ, ಯೇನೆಪೋಯ ವಿವಿ ಕುಲಪತಿ ವೈ.ಅಬ್ದುಲ್ಲಾ ಕುಂಞಿ ಸಮ್ಮುಖದಲ್ಲಿ ಉಸ್ತುವಾರಿ ಕುಲಸಚಿವ ಡಾ.ಬಿ.ಟಿ.ನಂದೀಶ್ ಒಪ್ಪಂದಕ್ಕೆ ಸಹಿ ಹಾಕಿದರು. ಸಹಾಯಕ ಕುಲಪತಿ ಫರ್ಹಾದ್ ಯೇನೆಪೋಯ, ಗೌರವ ಉಪಕುಲಪತಿ ಡಾ.ಎಂ.ವಿಜಯಕುಮಾರ್ ಉಪಸ್ಥಿತರಿದ್ದರು.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

UDAYAVANI SUDINA 02-11-2019

# ಯೇನಪೊಯ ವಿವಿ: ಘಾನಾ ಸರಕಾರದೊಂದಿಗೆ ಒಪ್ಪಂದ



ಯೇನಪೊಯ ವಿವಿ ಮತ್ತು ಘಾನಾ ಸರಕಾರದೊಂದಿಗೆ ಒಪ್ಪಂದ ನಡೆಯಿತು.

**ದೇರಳಕಟ್ಟೆ**, ನ. 1: ಯೇನಪೊಯ (ಪರಿಗಣಿಸ್ಪಟ್ಟಿರುವ ವಿಶ್ವವಿದ್ಯಾನಿಲಯ), ಘಾನಾ ಇಂಡಿಯಾ ಟ್ರೇಡ್ ಅಡ್ವೈಸರಿಚೇಂಬರ್ ಮತ್ತು ಘಾನಾ ಸರಕಾರಗಳು ಶೈಕ್ಷಣಿಕ ಸಹಕಾರ, ಆರೋಗ್ಯ ಸೇವೆಗಳನ್ನು ವಿಸ್ತರಿಸುವುದು, ಆರೋಗ್ಯ, ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ, ವೈದ್ಯಕೀಯ ಪ್ರವಾಸೋದ್ಯಮ, ಸಂಶೋಧನೆ ಹಾಗೂ ಅಭಿವೃದ್ಧಿ ಮತ್ತು ವ್ಯವಹಾರ ಅಭಿವೃದ್ಧಿ ವಿಷಯಗಳಲ್ಲಿ ಒಪ್ಪಂದಕ್ಕೆ ಸಹಿ ಹಾಕಿದವು.

ನಿಯೋಗದ ಭೇಟಿಯ ಸಂದರ್ಭ ಘಾನಾದ ಸಚಿವ ಸಾರಾ ಅಡ್ವೋ ಪಾಸಪ್ಪೊ, ಘಾನಾ-ಭಾರತದ ವ್ಯಾಪಾರ ಸಲಹಾ ಸಮಿತಿಯ ಅಧ್ಯಕ್ಷ ಡೊಮಿನಿಕ್ ಒಡುರೊ-ಅಂಟ್ವಿ ಮತ್ತು ಉಸ್ತುವಾರಿ ಕುಲಸಚಿವ ಡಾ| ಬಿ.ಟಿ. ನಂದೀಶ್ ಅವರು ಹ್ಯಾನಿ ಮೊಕ್ಟಿನಬ್, ಜಾನ್ವಾಡ್ವೋಅಯಿಲಅಹ್, ಡೇನಿಯಲ್ ಅಪಿಆಹ್ ಒಟೂ ಮತ್ತು ಡಾ| ಫ್ಲೆಲಾರಿ ಬಾನಬಿಲಾ ಮತ್ತು ಸಹಾಯಕ ಉಪಕುಲಪತಿ ಡಾ| ಸಿ.ವಿ. ರಘುವೀರ್ ಅವರ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ ಹಾಕಿದರು.

ಯೇನಪೊಯ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಸಲಹೆಗಾರ ಡಾ| ಅಬ್ದುಲ್ ರಹೀಮಾನ್, ಕ್ಯೂಎಸಿಯ ಉಪ ನಿರ್ದೇಶಕ ಡಾ| ಅರುಣ್ ಭಾಗವತ್, ವಿವಿಧ ವಿಭಾಗಗಳ ಡೀನ್‌ಗಳು ಹಾಗೂ ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳು ಮತ್ತು ದೆಹಲಿಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಿಭಾಗದ ಕಾರ್ಯನಿರ್ವಾಹಕ ಮುಖ್ಯಸ್ಥೆ ಹಾಗೂ ಎನ್ಐಆರ್ ಅಧ್ಯಾಯ ಮತ್ತು ಮಾನವ ಸಾಧಕರ ಪ್ರತಿಷ್ಠಾನದ ಅಧ್ಯಕ್ಷೆ ಡಾ| ಸೆನೋರಿಟಾ ಐವಾನ್ ಮೊದಲಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ATTESTED
Dr. Gangadhara Soma...
Registrar
Yenepoya (Deemed to be U...
University Road, Dera...
Mangalore 575 018, Ka...

# APPEARED IN UDAYAVANI DTD ON 03-11-2019

## ಯೇನಪೊಯ: ಫ್ರಾನ್ಸ್‌ನೊಂದಿಗೆ ಒಪ್ಪಂದಕ್ಕೆ ಸಹಿ



ಉಸ್ತುವಾರಿ ಕುಲಸಚಿವ ಡಾ| ಬಿ.ಟಿ. ನಂದೀಶ್ ಅವರು ಒಪ್ಪಂದಕ್ಕೆ ಸಹಿ ಹಾಕಿದರು.

**ದೇರಳಕಟ್ಟೆ** ನ. 2: ಯೇನಪೊಯ (ಪರಿಗಣಿಸಲ್ಪಟ್ಟಿರುವ ವಿಶ್ವವಿದ್ಯಾನಿಲಯ) ಮತ್ತು ಉಗಾಂಡಾದ ಹೈಕಮಿಷನರ್ ಅವರೊಂದಿಗೆ ಆರೋಗ್ಯ, ಶಿಕ್ಷಣ, ಕೌಶಲಾಭಿವೃದ್ಧಿ, ಸಂಶೋಧನೆ ಮತ್ತು ಅಭಿವೃದ್ಧಿ ವಿಷಯದಲ್ಲಿ ಶೈಕ್ಷಣಿಕ ಸಹಕಾರ, ಆರೋಗ್ಯ ಸೇವೆಗಳನ್ನು ವಿಸ್ತರಿಸುವುದು ಮತ್ತು ಉಭಯ ದೇಶಗಳ ನಡುವಿನ ಸಂಬಂಧವನ್ನು ಬಲಪಡಿಸುವ ನಿಟ್ಟಿನಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಉಗಾಂಡಾದಿಂದ ವಿವಿಗೆ ನಿಯೋಗದ ಭೇಟಿಯ ಸಂದರ್ಭದಲ್ಲಿ ಎಚ್.ಇ. ಉಗಾಂಡಾ ಗಣರಾಜ್ಯದ ಹೈ ಕಮಿಷನರ್ ಮಹಮ್ಮದ್ ಬಸ್ವಾರಿ ಬಟ್ವಾಗ್ಗೆನ್ ಕಜಾಲಾ ಮತ್ತು ವಿಶ್ವವಿದ್ಯಾನಿಲಯದ ಕುಲಪತಿ ವೈ. ಅಬ್ದುಲ್ಲಾ ಕುಞ್ಞಿ ಅವರ ಸಮ್ಮುಖದಲ್ಲಿ ಉಸ್ತುವಾರಿ ಕುಲಸಚಿವ ಡಾ| ಬಿ.ಟಿ. ನಂದೀಶ್ ಅವರು ಒಪ್ಪಂದಕ್ಕೆ ಸಹಿ ಹಾಕಿದರು.

ಈ ಸಂದರ್ಭ ಸಹಾಯಕ ಕುಲಪತಿಗಳಾದ ಫರ್ಹಾದ್ ಯೇನಪೊಯ, ಉಪಕುಲಪತಿ ಡಾ| ಎಂ. ವಿಜಯಕುಮಾರ್, ಸಹ ಉಪಕುಲಪತಿ ಡಾ| ಸಿ.ವಿ. ರಘುವೀರ್, ಶೈಕ್ಷಣಿಕ ಸಲಹೆಗಾರ ಡಾ| ಅಬ್ದುಲ್ ರಹಿಮಾನ್, ಕ್ಯುಎಸಿಯ ಉಪ ನಿರ್ದೇಶಕ ಡಾ| ಅರುಣ್ ಭಾಗವತ್, ಡೈ. ಡೈರೆಕ್ಟರ್ (ಕ್ಯೂಎಸಿ) ಜತೆಗೆ ಘಟಕಗಳ ಡೀನ್‌ಗಳು ಹಾಗೂ ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳು ಮತ್ತು ಹೊಸದಿಲ್ಲಿಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಿಭಾಗದ ಕಾರ್ಯನಿರ್ವಾಹಕ ಮುಖ್ಯಸ್ಥೆ ಡಾ| ಸೆನೋರಿಟಾ ಐಸಾಕ್ ಮೊದಲಾದವರು ಉಪಸ್ಥಿತರಿದ್ದರು.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN "UDAYAVANI" DTD 5.3.18

### ವೈದ್ಯಕೀಯ ಪ್ರವಾಸೋದ್ಯಮ

# ಕೀನ್ಯಾ ಜತೆ ಮಂಗಳೂರು ಆಸ್ಪತ್ರೆಗಳ ಒಡಂಬಡಿಕೆ



ಯೇನಪೊಯ, ಕಣಚೂರು ಹಾಗೂ ಎಂಐಒ ಆಸ್ಪತ್ರೆಗಳಿಗೆ ಕೀನ್ಯಾದ ಮೊಂಬಾಸದ 10 ಜನರ ನಿಯೋಗ ಭೇಟಿ ನೀಡಿತು.

ಮಂಗಳೂರು, ಮಾ. 4: ವೈದ್ಯಕೀಯ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ಮಂಗಳೂರಿನ ಹಿರಿಮೆಗೆ ಗರಿಯಾಗುವ ಮತ್ತು ವೈದ್ಯಕೀಯ ಪ್ರವಾಸೋದ್ಯಕ್ಕೆ ಅಡಿಗಲ್ಲು ಹಾಕುವ ನೆಲೆಯಲ್ಲಿ ಮಹತ್ವದ ಕಾರ್ಯಕ್ಕೆ ವೇದಿಕೆ ಸಿದ್ಧವಾಗಿದೆ. ಕೀನ್ಯಾದ ಎರಡನೇ ದೊಡ್ಡ ನಗರ ಮೊಂಬಾಸ ಮತ್ತು ಮಂಗಳೂರಿನ ಪ್ರತಿಷ್ಠಿತ ಯೇನಪೋಯ, ದೇರಳಕಟ್ಟೆಯ ಕಣಚೂರು ಹಾಗೂ ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆ್ಯಂಕಾಲಜಿ ಆಸ್ಪತ್ರೆಗಳ ಮಧ್ಯೆ ವೈದ್ಯಕೀಯ ಪ್ರವಾಸೋದ್ಯಮ ಅಭಿವೃದ್ಧಿಯ ನಿಟ್ಟಿನಲ್ಲಿ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

ಮೊಂಬಾಸದ ಆರೋಗ್ಯ ಕಾರ್ಯದರ್ಶಿ ಡಾ| ಖತೀಜಾ ಸೂಡ್ ಶೇಕ್ಲಿ ಅವರ ನೇತೃತ್ವದಲ್ಲಿ ಮೊಂಬಾಸದ 10 ಮಂದಿಯ ನಿಯೋಗ ರವಿ ವಾರ ಮಂಗಳೂರಿಗೆ ಭೇಟಿ ನೀಡಿ, ಸಚಿವ ಯು.ಟಿ. ಖಾದರ್ ಅವರ ಉಪಸ್ಥಿತಿಯಲ್ಲಿ 3 ಆಸ್ಪತ್ರೆಗಳೊಂದಿಗೆ ಮಂಗಳೂರಿನಲ್ಲಿ ಒಪ್ಪಂದ ಮಾಡಿಕೊಂಡಿದೆ.

ಸಚಿವ ಯು.ಟಿ. ಖಾದರ್ ಮಾತನಾಡಿ, ಮಂಗಳೂರು ಅತ್ಯುತ್ತಮ ಆರೋಗ್ಯ ಸೌಕರ್ಯವನ್ನು ಹೊಂದಿವೆ. ಇದು ಜಾಗತಿಕ ಆರೋಗ್ಯ ಕೇಂದ್ರವಾಗಿ ಬೆಳೆಯಲು ಅನನ್ಯವಾದ ಸ್ಥಾನವನ್ನು ಹೊಂದಿದೆ ಎಂದರು.

ಇದು ಮೊಂಬಾಸ ಸರಕಾರ ಮತ್ತು ಮಂಗಳೂರಿನ 3 ಆಸ್ಪತ್ರೆಗಳ ನಡುವಿನ ಒಪ್ಪಂದ ಮಾತ್ರವಲ್ಲದೆ, 2 ನಗರಗಳ ನಡುವಿನ ಒಪ್ಪಂದವೂ ಆಗಿದೆ. ಮೊಂಬಾಸ ರಾಜ್ಯದ ವೈದ್ಯರು, ವೈದ್ಯಕೀಯ ಸಿಬಂದಿ, ತಂತ್ರಜ್ಞರು ಮಂಗಳೂರಿಗೆ ಬಂದು ತರಬೇತಿ ಪಡೆಯುವುದು, ಅಲ್ಲಿನ ರೋಗಿಗಳು ಮಂಗಳೂರಿಗೆ ಬಂದು ಚಿಕಿತ್ಸೆ ಪಡೆಯುವುದು ಈ ಒಪ್ಪಂದದಲ್ಲಿ ಸೇರಿದೆ ಎಂದರು.

ಮೊಂಬಾಸದ ಮುಖ್ಯ ಆರೋಗ್ಯ ಕಾರ್ಯದರ್ಶಿ ಡಾ| ಖತೀಜಾ ಸೂಡ್ ಶೇಕ್ಲಿ ಮಾತನಾಡಿ, ಕೀನ್ಯಾದಲ್ಲಿ ಒಂದೇ ಒಂದು ರೇಡಿಯೋಥೆರಪಿ ಕೇಂದ್ರ ಇದ್ದರೆ ಮಂಗಳೂರಿನಲ್ಲಿ ಹಲವಾರು ಇವೆ. ಅಲ್ಲದೆ, ಮಂಗಳೂರಿನಲ್ಲಿ ರೋಬೋಟಿಕ್, ಸ್ಪೈನಲ್ ಶಸ್ತ್ರಚಿಕಿತ್ಸಾ ಸೌಲಭ್ಯಗಳಿವೆ. ನೇರ ವಿಮಾನಯಾನ ಸೌಲಭ್ಯ ಇರುವುದರಿಂದ ಕೀನ್ಯಾದ ರೋಗಿಗಳು ಇಲ್ಲಿಗೆ ಬಂದು ಚಿಕಿತ್ಸೆ ಪಡೆಯಲು ಅನುಕೂಲವಿದೆ. ಮುಂಬಯಿಯಲ್ಲಿ ಚಿಕಿತ್ಸೆ ಪಡೆಯುವುದಕ್ಕಿಂತ ಮಂಗಳೂರಿಗೆ ಬಂದರೆ ಖರ್ಚು ಕಡಿಮೆಯಾಗುತ್ತದೆ. ಆದ್ದರಿಂದ ಈಗ ಮಾಡಲಾದ ಒಪ್ಪಂದವನ್ನು ಮುಂದಿನ ದಿನಗಳಲ್ಲಿ ಇನ್ನಷ್ಟು ಆಸ್ಪತ್ರೆಗಳೊಂದಿಗೆ ವಿಸ್ತರಿಸಲು ಯೋಜಿಸಲಾಗಿದೆ ಎಂದರು.

ಮೊಂಬಾಸ ನಿಯೋಗದಲ್ಲಿ ಅಲ್ಲಿನ ಸಂಸದ ಕಿಗ್ವಾನಾ, ಅಲ್ಲಿನ ಮುಖ್ಯಮಂತ್ರಿಗಳ ಪ್ರತಿನಿಧಿ ಆಲ್ಫೋನ್ಸೋ, ಸದಸ್ಯರಾದ ಡಾ| ಬಜಾಬೇರ್, ಡಾ| ಖಲೀಲ್ ಖಿಂಡ್ವಾಲಾ, ಡಾ| ಫಿರ್ದೋಸ್, ಮಧು ಪಟೇಲ್ ಉಪಸ್ಥಿತರಿದ್ದರು.

ದೇರಳಕಟ್ಟೆಯ ಕಣಚೂರು ಆಸ್ಪತ್ರೆಯ ಅಧ್ಯಕ್ಷರಾದ ಕಣಚೂರು ಮೋನು, ನಿರ್ದೇಶಕ ರೆಹಮಾನ್, ಯೇನಪೊಯ ಆಸ್ಪತ್ರೆಯ ಮೆಡಿಕಲ್ ಡೈರೆಕ್ಟರ್ ಡಾ| ತಾಹೀರ್, ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆ್ಯಂಕಾಲಜಿಯ ಅಧ್ಯಕ್ಷ ಅನಂತಕೃಷ್ಣ, ನಿರ್ದೇಶಕರಾದ ಡಾ| ಸುರೇಶ್ ರಾವ್, ಸಿಐಎಂ ಬೆಂಗಳೂರು- ಮಂಗಳೂರು ವ್ಯವಸ್ಥಾಪಕ ನಿರ್ದೇಶಕರಾದ ಅನಿತಾ ನಿರಂಜನ್, ಮಂಗಳೂರು ಆರೋಗ್ಯ ಪ್ರವಾಸೋದ್ಯಮ ಕಾರ್ಯಪಡೆಯ ಪ್ರಮುಖರಾದ ಸಂಜಯ್ ಭಟ್ ಉಪಸ್ಥಿತರಿದ್ದರು.


ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN "VARTHABHARATHI" DTD 5.3.18

# ಯೆನೆಪೊಯ, ಕಣಚೂರು, ಎಂಐಒ ಆಸ್ಪತ್ರೆಗಳೊಂದಿಗೆ ಮೊಂಬಾಸ ಒಡಂಬಡಿಕೆ

## ಕೀನ್ಯಾ-ಮೊಂಬಾಸದ ಉನ್ನತ ಮಟ್ಟದ ಸದಸ್ಯರ ನಿಯೋಗ ಭೇಟಿ



ಮಂಗಳೂರು, ಮಾ.4: ಕೀನ್ಯಾ ದೇಶದ ಮೊಂಬಾಸ ರಾಜ್ಯದ ಮುಖ್ಯ ಆರೋಗ್ಯ ಕಾರ್ಯದರ್ಶಿಗಳ ನೇತೃತ್ವದ ಉನ್ನತ ಮಟ್ಟದ ಸದಸ್ಯರ ನಿಯೋಗವೊಂದು ಮಂಗಳೂರಿನ ಮೂರು ಆಸ್ಪತ್ರೆಗಳೊಂದಿಗೆ ಚಿಕಿತ್ಸೆ, ವೈದ್ಯಕೀಯ ಪರಿಣತಿಯನ್ನು ಹಂಚಿಕೊಳ್ಳಲು ಹಾಗೂ ತರಬೇತಿ ಪಡೆಯಲು ಒಡಂಬಡಿಕೆ ಮಾಡಿಕೊಳ್ಳುವ ಉದ್ದೇಶದಿಂದ ಇಂದು ನಗರಕ್ಕೆ ಭೇಟಿ ನೀಡಿ ಸಮಾಲೋಚನೆ ನಡೆಸಿದೆ.

ನಗರದಲ್ಲಿಂದು ಕರೆದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ರಾಜ್ಯ ಆಹಾರ ಸಚಿವ ಯು.ಟಿ.ಖಾದರ್, ಮಂಗಳೂರು ಆರೋಗ್ಯ ಶಿಕ್ಷಣ ಕ್ಷೇತ್ರದಲ್ಲಿ ದೇಶದ ಪ್ರಮುಖ ಕೇಂದ್ರವಾಗಿ ಗುರುತಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಮಂಗಳೂರಿನ ಪ್ರವಾಸೋದ್ಯಮ ಕಾರ್ಯಪಡೆ ಕೀನ್ಯಾ-ಮುಂಬಾಸ ರಾಜ್ಯದ ಉನ್ನತ ಮಟ್ಟದ ಸದಸ್ಯರನ್ನು ಸಂಪರ್ಕ ಮಾಡಿತ್ತು. ಈ ಬಗ್ಗೆ ಆಸಕ್ತಿ ವಹಿಸಿದ ಮುಂಬಾಸ ತಂಡ ಪ್ರಥಮ ಹಂತದಲ್ಲಿ ಮಂಗಳೂರಿನ ಯೆನೆಪೊಯ ಆಸ್ಪತ್ರೆ, ಕಣಚೂರು ಆಸ್ಪತ್ರೆ ಮತ್ತು ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿ ಆಸ್ಪತ್ರೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ಮುಂದಿನ ಹಂತದಲ್ಲಿ ಇತರ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಸಾಧ್ಯತೆ ಇದೆ ಎಂದರು.

ಮೊಂಬಾಸದ ಮುಖ್ಯ ಆರೋಗ್ಯ ಅಧಿಕಾರಿ ಡಾ.ಖತೀಜಾ ಶೇಕ್ ಮಾತನಾಡಿ, ತಮ್ಮ ದೇಶದಲ್ಲಿ ಆರೋಗ್ಯ ಕ್ಷೇತ್ರದ ವಿವಿಧ ಆಧುನಿಕ ಚಿಕಿತ್ಸಾ ಸೌಲಭ್ಯಗಳ ಕೊರತೆ ಇರುವ ಹಿನ್ನೆಲೆಯಲ್ಲಿ ಹಾಗೂ ಇರುವ ಆರೋಗ್ಯ ಕ್ಷೇತ್ರದ ವೈದ್ಯರಿಗೆ ಹಾಗೂ ಸಿಬ್ಬಂದಿಗೆ ಹೆಚ್ಚಿನ ಪರಿಣತಿ ಮತ್ತು ಕೌಶಲ್ಯವನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಮಂಗಳೂರಿನ ಆಸ್ಪತ್ರೆಗಳನ್ನು ಆಯ್ಕೆ ಮಾಡಿ ಆರೋಗ್ಯ ಕ್ಷೇತ್ರದ ಬಗ್ಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಗುಣಮಟ್ಟದ ವೈದ್ಯಕೀಯ ಚಿಕಿತ್ಸೆ ಕಡಿಮೆ ದರದಲ್ಲಿ ದೊರೆಯುತ್ತದೆ ಮತ್ತು ನೇರ ವಿಮಾನಯಾನದ ಸೌಕರ್ಯದಿಂದ ವೆಚ್ಚವು ಕಡಿಮೆಯಾಗುತ್ತದೆ ಎನ್ನುವ ಕಾರಣದಿಂದ ಮಂಗಳೂರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅಲ್ಲದೆ ಮುಂಬಾಸದಲ್ಲಿ ಆರೋಗ್ಯ ಸೇವೆಯ ಯೋಜನೆಯ ಹಿನ್ನೆಲೆಯಲ್ಲಿ ಈ ಸೌಲಭ್ಯವನ್ನು ವಿಸ್ತರಿಸುವ ದೂರದೃಷ್ಟಿಯಿದೆ. ಈ ಹಿನ್ನೆಲೆಯಲ್ಲಿ ಉನ್ನತ ಮಟ್ಟದ ತಂಡ ಮಂಗಳೂರಿಗೆ ಭೇಟಿ ನೀಡಿದೆ ಎಂದು ವಿವರಿಸಿದರು.

ಕೀನ್ಯಾ ಮುಂಬಾಸ ತಂಡದಲ್ಲಿ ಸಂಸತ್ ಸದಸ್ಯ ಕಿಬ್ವಾನ, ಮುಂಬಾಸ ರಾಜ್ಯಪಾಲರ ಪ್ರತಿನಿಧಿ ಅಲ್ಫನ್ಸೋ ಹಾಗೂ ಉನ್ನತ ಮಟ್ಟದ ತಂಡದ ಸದಸ್ಯರಾದ ಡಾ.ಇಲ್ವಾನ, ಡಾ.ಪೀಟರ್ ಥೆರಾಸ್, ಡಾ.ಬರ್ಝೂಬೆರ್, ಡಾ.ಇಕ್ಬಾಲ್ ಖಂಡೆವಾಲಾ, ಡಾ.ಫಿರ್ದೌಸ್, ಡಾ.ಮಧು ಪಟೇಲ್ ಮೊದಲಾದವರು ಉಪಸ್ಥಿತರಿದ್ದರು.

ಕಣಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಅಧ್ಯಕ್ಷ ಯು.ಕೆ.ಕಣಚೂರು ಮೋನು, ಯೆನೆಪೊಯ ವೈದ್ಯಕೀಯ ಆಸ್ಪತ್ರೆ ಹಾಗೂ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿ ಡಾ.ತಾಹಿರ್ ಯೆನೆಪೊಯ, ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕೋಲಜಿಯ ನಿರ್ದೇಶಕ ಸುರೇಶ್ ರಾವ್, ಮಂಗಳೂರು ಪ್ರವಾಸೋದ್ಯಮ ಆರೋಗ್ಯ ಕಾರ್ಯಪಡೆಯ ಸಲಹೆಗಾರ ಸಂಜಯ ಭಟ್, ಮಂಗಳೂರು ಪ್ರವಾಸೋದ್ಯಮ ಕಾರ್ಯಪಡೆಯ ಸದಸ್ಯ ಅನಂತ ಕೃಷ್ಣ ಭಟ್ ಮೊದಲಾದವರು ಉಪಸ್ಥಿತರಿದ್ದರು.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN "VIJAYAKARNATAKA" DTD 5.3.18

ವಿಜಯ ಕರ್ನಾಟಕ VK facebook.com/vijaykarnataka twitter.com/vijaykarnataka www.vijaykarnatakaepaper.com

# ಆರೋಗ್ಯ ಸಹಯೋಗಕ್ಕೆ ಮಂಗಳೂರು-ಕೀನ್ಯಾ ಒಪ್ಪಂದ

ವಿಕ ಸುದ್ದಿಲೋಕ ಮಂಗಳೂರು

ಪೂರ್ವ ಆಫ್ರಿಕಾದ ಕೀನ್ಯಾ ದೇಶದ ಮೊಂಬಾಸ ಪ್ರಾಂತ್ಯದ ಸರಕಾರ ಮತ್ತು ಮಂಗಳೂರಿನ ಮೂರು ಖಾಸಗಿ ಆಸ್ಪತ್ರೆಗಳ ಮಧ್ಯೆ ಆರೋಗ್ಯ ಸಹಯೋಗ ಬೆಳೆಯಲಿದ್ದು, ಮುಂದಿನ ದಿನಗಳಲ್ಲಿ ಪರಸ್ಪರ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಲಾಗುವುದು ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ಹೇಳಿದರು.

ಮೊಂಬಾಸಾದ ಸಂಸದರು ಸಹಿತ ಆರೋಗ್ಯ ಸಚಿವಾಲಯದ ಹಿರಿಯ ಅಧಿಕಾರಿಗಳು, ವೈದ್ಯರ ತಂಡ ಭಾನುವಾರ ಮಂಗಳೂರಿಗೆ ಆಗಮಿಸಿದ್ದು, ಆಸ್ಪತ್ರೆಗೆ ಭೇಟಿ ನೀಡಿ ಪತ್ರ ವ್ಯವಹಾರ ಮೂಲಕ ಸಮಾಲೋಚನೆ ನಡೆಸಿದ ಬಳಿಕ ಸಚಿವರು ಪತ್ರಕರ್ತರಿಗೆ ಈ ವಿಷಯ ತಿಳಿಸಿದರು.

ಮೊದಲ ಬಾರಿಗೆ ವಿದೇಶಿ ಮೊಂಬಾಸ ಸರಕಾರ ಮತ್ತು ಮಂಗಳೂರಿನ ಆಸ್ಪತ್ರೆಗಳ ನಡುವೆ ವೈದ್ಯಕೀಯ ಪ್ರವಾಸೋದ್ಯಮ ಒಪ್ಪಂದ ಮಾಡಲಾಗುತ್ತಿದೆ. ಇದು ಎರಡು ನಗರಗಳ ನಡುವಿನ ಒಪ್ಪಂದವೂ ಹೌದು. ಮಂಗಳೂರಿನಲ್ಲಿ ಕಣಚೂರು ಆಸ್ಪತ್ರೆ, ಯೆನೆಪೋಯ ಆಸ್ಪತ್ರೆ ಮತ್ತು ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿ ಜತೆ ಒಪ್ಪಂದ ಮಾಡಲಾಗುತ್ತಿದೆ ಎಂದರು.

ಕೀನ್ಯಾ ಮೊಂಬಾಸ ರಾಜ್ಯದ ಆರೋಗ್ಯ ಸೇವೆಗಳ ಇಲಾಖೆ ಮುಖ್ಯಾಧಿಕಾರಿ ಡಾ. ಖದೀಜಾ ನೂರ್ ಶಿಕ್ಲಿ ಮಾತನಾಡಿ, ಈ ಒಪ್ಪಂದದಿಂದ ಮೊಂಬಾಸ ರಾಜ್ಯದ ವೈದ್ಯರು, ವೈದ್ಯಕೀಯ ಸಿಬ್ಬಂದಿ, ಟೆಕ್ನಿಶಿಯನ್ಸ್ ಮಂಗಳೂರಿಗೆ ಬಂದು



ಮಂಗಳೂರಿನಲ್ಲಿ ಕೀನ್ಯಾ ಮೊಂಬಾಸ ರಾಜ್ಯದ ನಿಯೋಗದೊಂದಿಗೆ ಆರೋಗ್ಯ ಸಚಿವ ಯು.ಟಿ.ಖಾದರ್ ಮತ್ತು ಆಸ್ಪತ್ರೆಗಳ ಮುಖ್ಯಸ್ಥರು.

ತರಬೇತಿ ಪಡೆಯಲಿದ್ದಾರೆ. ಅಲ್ಲಿನ ರೋಗಿಗಳು ಮಂಗಳೂರಿಗೆ ಆಗಮಿಸಿ ಚಿಕಿತ್ಸೆಯನ್ನು ಪಡೆಯಲಿದ್ದಾರೆ. ಹೊರ ದೇಶದ ರೋಗಿಗಳು ಇಲ್ಲಿ ಚಿಕಿತ್ಸೆ ಪಡೆಯುವುದರಿಂದ ಮಂಗಳೂರಿನಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿಯಾಗಲಿದೆ ಎಂದು ಹೇಳಿದರು.

ಕೀನ್ಯಾದಲ್ಲಿ ಒಂದೇ ಒಂದು ರೇಡಿಯೋಥೆರಪಿ ಕೇಂದ್ರ ಇದ್ದರೆ ಮಂಗಳೂರಿನಲ್ಲಿ ಹಲವಿದೆ. ಅಲ್ಲದೆ, ಮಂಗಳೂರಿನಲ್ಲಿ ರೋಬೋಟಿಕ್, ಸ್ಪೈನಲ್ ಶಸ್ತ್ರಚಿಕಿತ್ಸಾ ಸೌಲಭ್ಯಗಳಿವೆ. ನೇರ ವಿಮಾನಯಾನ ಸೌಲಭ್ಯ ಇರುವುದರಿಂದ ಕೀನ್ಯಾದ ರೋಗಿಗಳು ಇಲ್ಲಿಗೆ ಬಂದು ಚಿಕಿತ್ಸೆ ಪಡೆಯಲು ಅನುಕೂಲವಿದೆ. ಮುಂಬಯಿಯಲ್ಲಿ ಚಿಕಿತ್ಸೆ ಪಡೆಯುವುದಕ್ಕಿಂತ ಮಂಗಳೂರಿಗೆ ಬಂದರೆ ವೆಚ್ಚ ಕಡಿಮೆಯಾಗುತ್ತದೆ. ಇದರಿಂದ ಈಗ ನಡೆಯುವ ಒಪ್ಪಂದ ಮುಂದೆ ಇನ್ನಷ್ಟು ಆಸ್ಪತ್ರೆಗಳೊಂದಿಗೆ ವಿಸ್ತರಿಸುವ ಯೋಜನೆ ಇದೆ. ಮೊಂಬಾಸದಲ್ಲೂ ಆರೋಗ್ಯ ಕ್ಷೇತ್ರ ಸಹಿತ ನಾನಾ ಕ್ಷೇತ್ರಗಳಲ್ಲಿ ಮಂಗಳೂರಿನವರು ಹೂಡಿಕೆ ಮಾಡಲು ಅವಕಾಶವಿದೆ ಎಂದು ಖದೀಜಾ ಹೇಳಿದರು.

ಮೊಂಬಾಸದ ಸಂಸದ ಡಾ. ಶಿಬ್ಬಾನ ಅಬ್ದುಲ್ಲ, ಮುಖ್ಯಮಂತ್ರಿಗಳ ಪ್ರತಿನಿಧಿ ಅಲ್ಫೋನ್ಸ್, ನಿಯೋಗದ ಸದಸ್ಯರಾದ ಇಲ್‌ಹಾನ್ ಅಬ್ಬಾಸ್, ಡಾ. ಪೀಟರ್, ಡಾ. ಬಾಶೀರ್, ಡಾ. ಇಕ್ಬಾಲ್ ಖಂಡ್ವಾಲಾ, ಡಾ. ಫಿರ್ದೋಸ್, ಡಾ. ಫಿರ್ದೌಸ್, ಡಾ. ಮಧು ಪಟೇಲ್, ಮೈಂಡ್‌ಫುಲ್ ಹೆಲ್ತ್ ಕೇರ್ ಕನ್ಸಲ್ಟಿಂಗ್‌ನ ನಿರ್ದೇಶಕರಾದ ಸಂಜಯ್ ಭಟ್, ಸಿಎಂ ಗ್ಲೋಬಲ್‌ನ ಆಡಳಿತ ನಿರ್ದೇಶಕರಾದ ಅನಿತಾ ನಿರಂಜನ್, ಕಣಚೂರು ಆಸ್ಪತ್ರೆ ಅಧ್ಯಕ್ಷ ಕಣಚೂರು ಮೋನು, ಯೆನೆಪೋಯ ಆಸ್ಪತ್ರೆ ವೈದ್ಯಕೀಯ ನಿರ್ದೇಶಕರಾದ ಡಾ. ಮೊಹಮ್ಮದ್ ತಾಹಿರ್, ಎಂಐಒ ಆಸ್ಪತ್ರೆಯ ಮುಖ್ಯಸ್ಥರಾದ ಅನಂತಕೃಷ್ಣ ಮತ್ತು ಡಾ. ಸುರೇಶ್ ರಾವ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

https://mail.google.com/mail/u/0/#search/newspaperclip

**APPEARED IN "PRAJAVANI" DTD 05.3.18**

## ಮಂಗಳೂರಿನ ಆಸ್ಪತ್ರೆ– ಕೀನ್ಯಾ ನಿಯೋಗದ ಒಪ್ಪಂದ

# ಕೀನ್ಯಾದ ವೈದ್ಯರಿಗೆ ಮಂಗಳೂರಿನಲ್ಲಿ ತರಬೇತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಕೀನ್ಯಾದೇಶವು ಆರೋಗ್ಯ ಕ್ಷೇತ್ರದಲ್ಲಿ ಮಂಗಳೂರಿನೊಂದಿಗೆ ಪಾಲುದಾರನಾಗಲು ಹೆಚ್ಚು ಸಂತಸ ವ್ಯಕ್ತಪಡಿಸುತ್ತಿದ್ದು, ಇದೊಂದು ಆದರ್ಶ ಪಾಲುದಾರಿಕೆ ಆಗಲಿದೆ ಎಂದು ಕೀನ್ಯಾದ ಮೊಂಬಾಸ್ ರಾಜ್ಯದ ಮುಖ್ಯ ಆರೋಗ್ಯ ಕಾರ್ಯದರ್ಶಿ ಡಾ. ಖತೀಜಾ ಸೂಡ್ ಶೆಕ್ಲಿ ಹೇಳಿದರು.

ನಗರದ ವಿವಿಧ ಆಸ್ಪತ್ರೆಗಳ ಜತೆಗೆ ಒಪ್ಪಂದ ಮಾಡಿಕೊಂಡಿರುವ ಕುರಿತು ಭಾನುವಾರ ನಗರದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಮಂಗಳೂರಿನಲ್ಲಿ ಒಳ್ಳೆಯ ವೈದ್ಯಕೀಯ ಸೌಕರ್ಯಗಳಿವೆ. ಅದನ್ನು ಕೀನ್ಯಾ ಬಳಕೆ ಮಾಡಲು ಇಚ್ಛಿಸುತ್ತದೆ. ಇದರ ಜತೆಗೆ ಮಂಗಳೂರಿನ ಉದ್ಯಮಿಗಳು ಕೀನ್ಯಾದಲ್ಲಿ ಹೂಡಿಕೆ ಮಾಡಲು ಅವಕಾಶಗಳನ್ನು ತೆರೆದಿಡಲಾಗುತ್ತಿದೆ ಎಂದರು.

ಕೀನ್ಯಾ ದೇಶವು ಮಂಗಳೂರಿಗೆ ಸಾಕಷ್ಟು ಹೋಲಿಕೆ ಹೊಂದಿದೆ. ಕೀನ್ಯಾ ಪೂರ್ವ ಕರಾವಳಿ ಪ್ರದೇಶವು ಸುಮಾರು 10 ಲಕ್ಷ ಜನಸಂಖ್ಯೆಯನ್ನು ಹೊಂದಿದ್ದು, ಸುತ್ತಲಿನ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿದೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ವಿಶ್ವ ದರ್ಜೆಯ ವೈದ್ಯಕೀಯ ವ್ಯವಸ್ಥೆ, ಪ್ರವಾಸಿಗರ ಆಕರ್ಷಣೆಯ ಸ್ಥಳಗಳು ಹಾಗೂ ಸ್ನೇಹಪರ ಜನರನ್ನು ಒಳಗೊಂಡ ಮಂಗಳೂರಿನೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಉತ್ಸುಕವಾಗಿದೆ ಎಂದು ವಿವರಿಸಿದರು.

'ನಗರದ ಯೇನೆಪೋಯ ಆಸ್ಪತ್ರೆಯಲ್ಲಿ ರೊಬೋಟಿಕ್ ಶಸ್ತ್ರಚಿಕಿತ್ಸೆ, ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಅಂಕಾಲಜಿಯಲ್ಲಿ ಕ್ಯಾನ್ಸರ್ ಚಿಕಿತ್ಸಾ ಕ್ರಮ, ಬೆನ್ನು ಮೂಳೆ, ಎಲುಬು–ಕೀಲು ಚಿಕಿತ್ಸೆಗಾಗಿ ಕಣಚೂರು ಆಸ್ಪತ್ರೆಯಲ್ಲಿ ಸೌಲಭ್ಯಗಳು ಅತ್ಯಾಧುನಿಕವಾಗಿವೆ. ಇದೆಲ್ಲದರ ಕುರಿತು ನಮ್ಮ ವೈದ್ಯರಿಗೆ ತರಬೇತಿ ನೀಡಲಾಗುವುದು. ಜತೆಗೆ ಕೀನ್ಯಾದ ನ್ಯಾಷನಲ್ ಹೆಲ್ತ್ ಇನ್ಶುರೆನ್ಸ್ ನಿಧಿ ಇದ್ದು, ಅದನ್ನು ಬಳಕೆ ಮಾಡಿಕೊಂಡು ನಮ್ಮ ಜನರಿಗೆ ಇಲ್ಲಿ ಉತ್ತಮ ಚಿಕಿತ್ಸೆ ನೀಡುವುದು ಈ ಒಪ್ಪಂದದ ಉದ್ದೇಶವಾಗಿದೆ' ಎಂದು ಹೇಳಿದರು.

ಕೀನ್ಯಾದಲ್ಲಿ ಕ್ಯಾನ್ಸರ್ ಚಿಕಿತ್ಸೆಗಾಗಿ ಕಿಮೋಥೆರಪಿಯನ್ನು ಮಾತ್ರ ಬಳಕೆ ಮಾಡಲಾಗುತ್ತಿದೆ. ಆದರೆ, ಮಂಗಳೂರಿನಲ್ಲಿ ಕ್ಯಾನ್ಸರ್ ಚಿಕಿತ್ಸೆಗೆ ರೇಡಿಯೋಥೆರಪಿ ಜತೆಗೆ, ಅಲೋಪತಿ ಮತ್ತು ಆಯುರ್ವೇದಗಳನ್ನು ಬಳಕೆ ಮಾಡುತ್ತಿರುವುದು ವಿಶೇಷವಾಗಿದೆ ಎಂದರು.

ಆಹಾರ ಸಚಿವ, ಯು.ಟಿ. ಖಾದರ್ ಮಾತನಾಡಿ, ಮಂಗಳೂರು ಅತ್ಯುತ್ತಮ ಆರೋಗ್ಯ ಸೌಕರ್ಯ ಹೊಂದಿದೆ. ಇದು ಜಾಗತಿಕ ಆರೋಗ್ಯ ಕೇಂದ್ರವಾಗಿ ಬೆಳೆಯಲು ಅನನ್ಯವಾದ ಸ್ಥಾನದಲ್ಲಿದೆ. ಮಂಗಳೂರಿನ ಪ್ರವಾಸೋದ್ಯಮ ಕಾರ್ಯಪಡೆಯು, ಮೊಂಬಾಸ್‌ನೊಂದಿಗೆ ಮಾತುಕತೆ ನಡೆಸುವ ಮೂಲಕ ಒಪ್ಪಂದದ ವಿಷಯದಲ್ಲಿ ತ್ವರಿತ ಪ್ರಗತಿ ಸಾಧಿಸಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಮೊಂಬಾಸ್ ರಾಜ್ಯದ ಸಂಸದ ಡಾ. ಕಿಬ್ವಾನಾ, ಗವರ್ನರ್ ಪ್ರತಿನಿಧಿ ಅಲ್ಫೆಂಜೋ, ವೈದ್ಯರಾದ ಡಾ. ಪೀಟರ್, ಡಾ. ಇಕ್ಬಾಲ್, ಡಾ. ಫಿರ್ದೋಸ್, ಡಾ. ಮಧು ಪಟೇಲ್ ಸೇರಿದಂತೆ ಕೀನ್ಯಾದ 10 ಜನರ ನಿಯೋಗ ನಗರಕ್ಕೆ ಭೇಟಿ ನೀಡಿದೆ.

ಈ ಸಂದರ್ಭದಲ್ಲಿ ಮೈಂಡ್‌ಫುಲ್ ಕನ್ಸಲ್ಟನ್ಸಿ ಕಂಪನಿಯ ಸಂಜಯ್ ಭಟ್, ಕಣಚೂರು ಆಸ್ಪತ್ರೆಯ ಕಣಚೂರು ಮೋನು, ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಅಂಕಾಲಜಿಯ ನಿರ್ದೇಶಕ ಡಾ. ಸುರೇಶ್ ರಾವ್, ಮಂಗಳೂರು ಆರೋಗ್ಯ ಪ್ರವಾಸೋದ್ಯಮ ಸಮಿತಿ ಸದಸ್ಯೆ ಅನಿತಾ ನಿರಂಜನ್, ಯೇನೆಪೋಯ ಆಸ್ಪತ್ರೆಯ ಡಾ. ತಾಹೀರ್, ಡಾ. ಅನಂತ ಪ್ರಭು, ಉಪವಿಭಾಗಾಧಿಕಾರಿ ರೇಣುಕಾ ಪ್ರಸಾದ್ ಇದ್ದರು.



ಮಂಗಳೂರಿನ ಸರ್ಕೀಟ್ ಹೌಸ್‌ನಲ್ಲಿ ಭಾನುವಾರ ಕೀನ್ಯಾದ ನಿಯೋಗದೊಂದಿಗೆ ಸಚಿವ ಯು.ಟಿ. ಖಾದರ್ ಚರ್ಚೆ ನಡೆಸಿದರು.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

### ಯೆನೆಪೊಯ(ಡೀಮ್ಡ್ ಟು ಬಿ) ವಿವಿಯಲ್ಲಿ ಕ್ಯಾನ್ಸರ್ ತಡೆ-ನಿಯಂತ್ರಣ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ

# ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ಸ್ಥಾಪನೆಗೆ ಟಾಟಾ ಟ್ರಸ್ಟ್‌ನೊಂದಿಗೆ ಒಡಂಬಡಿಕೆ

**ಅಬ್ದುಲ್ಲಾ ಕುಂಞಿ**



ಯೆನೆಪೊಯ ಸಂಸ್ಥೆಯಲ್ಲಿ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ತೆರೆಯುವ ಒಡಂಬಡಿಕೆಗೆ ಸಹಿ ಹಾಕಿದ ದಾಖಲೆಯನ್ನು ಯೆನೆಪೊಯ ಡೀಮ್ಡ್ ಟು ಬಿ ವಿವಿ ಕುಲಪತಿ ವೈ.ಅಬ್ದುಲ್ಲಾ ಕುಂಞ್ ಹಾಗೂ ಟಾಟಾ ಟ್ರಸ್ಟ್ ಆಡಳಿತ ಟ್ರಸ್ಟಿ ಆರ್.ವೆಂಕಟರಮಣನ್ ಹಸ್ತಾಂತರಿಸಿದರು.

ಮಂಗಳೂರು, ಏ.24: ಯೆನೆಪೊಯ ಡೀಮ್ಡ್ ಟು ಬಿ ವಿಶ್ವವಿದ್ಯಾನಿಲಯ ಮತ್ತು ಆಸ್ಪತ್ರೆಯು ಮುಂಬೈಯ ಟಾಟಾ ಟ್ರಸ್ಟ್ ಸಹಯೋಗದೊಂದಿಗೆ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ಸ್ಥಾಪನೆಗೆ ಒಡಂಬಡಿಕೆ ಮಾಡಿಕೊಂಡಿದೆ. ಶೀಘ್ರದಲ್ಲಿ ಯೆನೆಪೊಯ ಸಂಸ್ಥೆಯಲ್ಲಿ ಕ್ಯಾನ್ಸರ್ ರೋಗ ತಡೆಗೆ ಅತ್ಯುತ್ತಮ ಚಿಕಿತ್ಸಾ ಕೇಂದ್ರ ಕಾರ್ಯಾರಂಭಗೊಳ್ಳಲಿದೆ ಎಂದು ಯೆನೆಪೊಯ ಡೀಮ್ಡ್ ಟು ಬಿ ಯುನಿವರ್ಸಿಟಿಯ ಕುಲಪತಿ ವೈ.ಅಬ್ದುಲ್ಲ ಕುಂಞ್ ತಿಳಿಸಿದ್ದಾರೆ.

ಯೆನೆಪೊಯ ಡೀಮ್ಡ್ ಟು ಬಿ ಯುನಿವರ್ಸಿಟಿಯಲ್ಲಿ 'ಆರೋಗ್ಯ ವರ್ಧನೆ ಮತ್ತು ಆರಂಭಿಕ ಹಂತದಲ್ಲೇ ರೋಗ ಪತ್ತೆಯೊಂದಿಗೆ ಕ್ಯಾನ್ಸರ್ ರೋಗ ತಡೆ ಮತ್ತು ನಿಯಂತ್ರಣ 'ಎಂಬ ವಿಚಾರದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ರಾಷ್ಟ್ರೀಯ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಕಳೆದ ವರ್ಷ ಉಡುಪಿಯಲ್ಲಿ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರ ನೆರವಿನೊಂದಿಗೆ ಹಮ್ಮಿಕೊಂಡಿದ್ದ ಕ್ಯಾನ್ಸರ್ ರೋಗದ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಯಶಸ್ವಿಯಾಗಲು ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುವುದಾಗಿ ಅಬ್ದುಲ್ಲಾ ಕುಂಞ್ ನುಡಿದರು.

ಮುಂಬೈಯ ಟಾಟಾ ಟ್ರಸ್ಟ್‌ನ ಆಡಳಿತ ಟ್ರಸ್ಟಿ ಆರ್.ವೆಂಕಟರಮಣನ್ ಮಾತನಾಡಿ, ಕ್ಯಾನ್ಸರ್‌ನ್ನು ತಡೆಗಟ್ಟಲು ಮತ್ತು ಗುಣಪಡಿಸಲು ರೋಗವನ್ನು ಶೀಘ್ರವಾಗಿ ಪತ್ತೆ ಮಾಡುವುದು ಮುಖ್ಯ. ಇದಕ್ಕೆ ಅತ್ಯುತ್ತಮ ರೋಗ ಪರೀಕ್ಷಾ ಕೇಂದ್ರದ ಅಗತ್ಯವಿದೆ. ಈ ನಿಟ್ಟಿನಲ್ಲಿ ಯೆನೆಪೊಯ ಸಂಸ್ಥೆಯ ಮೂಲಕ ತೆರೆಯಲಾಗುವ ಕ್ಯಾನ್ಸರ್ ಚಿಕಿತ್ಸಾ ಕೇಂದ್ರಕ್ಕೆ ಸಹಕಾರ ನೀಡುವ ಉದ್ದೇಶದಿಂದ ಟಾಟಾ ಟ್ರಸ್ಟ್ ಈ ಒಡಬಂಡಿಕೆ ಮಾಡಿಕೊಂಡಿದೆ ಎಂದರು.

ಮಂಗಳೂರು ವಿವಿಯ ಕುಲಪತಿ ಕೆ.ಭೈರಪ್ಪ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

ಸಮಾರಂಭದಲ್ಲಿ ಯೆನೆಪೊಯ ಡೀಮ್ಡ್ ಟು ಬಿ ವಿವಿ ಕುಲಪತಿ ವೈ.ಅಬ್ದುಲ್ಲಾ ಕುಂಞ್ ಹಾಗೂ ಟಾಟಾ ಟ್ರಸ್ಟ್ ಆಡಳಿತ ಟ್ರಸ್ಟಿ ಆರ್. ವೆಂಕಟರಮಣನ್ ಯೆನೆಪೊಯ ಸಂಸ್ಥೆಯಲ್ಲಿ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ತೆರೆಯುವ ಒಡಂಬಡಿಕೆಗೆ ಸಹಿ ಹಾಕಿ ದಾಖಲೆಯನ್ನು ಹಸ್ತಾಂತರಿಸಿದರು.

ಕ್ಯಾನ್ಸರ್ ಜಾಗೃತಿಗಾಗಿ ಸಹಕಾರ ನೀಡಿದ ಎನ್ಜಿಒ ಅಧಿಕಾರಿ ವಿನೀತಾ ರೈ, ಉಡುಪಿ ಜಿಲ್ಲಾ ರೋಗ ಸರ್ವೇಕ್ಷಣಾಧಿಕಾರಿ ಡಾ. ವಾಸುದೇವ್, ಇಂಡಿಯನ್ ಆಯಿಲ್ ಕಾರ್ಪೊರೇಶನ್ ಪ್ರತಿನಿಧಿ ವರದಾಚಾರಿ, ಉದ್ಯಮಿ ಆನಂದ ಕುಮಾರ್, ಉಡುಪಿಯ ಹಿಂದಿನ ಜಿಲ್ಲಾಧಿಕಾರಿ ಸದ್ಯ ಬೆಂಗಳೂರು ಪೌರಾಡಳಿತ ಇಲಾಖೆಯ ನಿರ್ದೇಶಕರಾಗಿರುವ ಡಾ. ವಿಶಾಲ್‌ರನ್ನು ಯೆನೆಪೊಯ ಅಬ್ದುಲ್ಲಾ ಕುಂಞ ಗೌರವಿಸಿದರು.

ಇದೇ ಸಂದರ್ಭದಲ್ಲಿ ಕ್ಯಾನ್ಸರ್ ಜಾಗೃತಿ ಮೂಡಿಸುವ ಸಂದೇಶ ಸಾರುವ ಸಿಡಿಯನ್ನು ಮುಂಬೈಯ ಟಾಟಾ ಟ್ರಸ್ಟ್‌ನ ಆಡಳಿತ ಟ್ರಸ್ಟಿ ಆರ್. ವೆಂಕಟರಮಣನ್ ಬಿಡುಗಡೆಗೊಳಿಸಿದರು.

ಯೆನೆಪೊಯ (ಡೀಮ್ಡ್ ಟು ಬಿ)ವಿವಿ ಕುಲಸಚಿವ ಡಾ. ಶ್ರೀ ಕುಮಾರ್ ಮೆನನ್ ಉಪಸ್ಥಿತರಿದ್ದರು. ರಾಷ್ಟ್ರೀಯ ಕಾರ್ಯಾಗಾರದ ಸಂಘಟನಾ ಕಾರ್ಯದರ್ಶಿ ಡಾ. ಅಭಯ ಎಸ್ ನೀರ್ಗುಡೆ ಸ್ವಾಗತಿಸಿದರು. ಜೊತೆ ಕಾರ್ಯದರ್ಶಿ ಡಾ.ವರುಣ್ ವಂದಿಸಿದರು.

> ಕ್ಯಾನ್ಸರ್ ತಡೆಗಟ್ಟುವುದು ನಮ್ಮ ಮುಂದಿರುವ ದೊಡ್ಡ ಸವಾಲಾಗಿದೆ. ಈ ಸವಾಲನ್ನು ಎದುರಿಸಲು ಸಂಘಟಿತ ಪ್ರಯತ್ನ ಅಗತ್ಯ. ಅದೇ ರೀತಿ ಯೆನೆಪೊಯ ಸಂಸ್ಥೆಯಲ್ಲಿ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ಆರಂಭಿಸಲು ಟಾಟಾ ಟ್ರಸ್ಟ್ ಸಹಕಾರ ನೀಡಲು ಮುಂದಾಗಿದೆ. ಇದರಿಂದ ಕ್ಯಾನ್ಸರ್ ಪೀಡಿತರಿಗೆ ಕನಿಷ್ಠ ದರದಲ್ಲಿ ಸ್ಥಳೀಯವಾಗಿ ಚಿಕಿತ್ಸೆ ನೀಡಲು ಸಾಧ್ಯವಾಗಲಿದೆ.
>
> । ವೈ.ಅಬ್ದುಲ್ಲ ಕುಂಞ್, ಯೆನೆಪೊಯ ಡೀಮ್ಡ್ ಟು ಬಿ ಯುನಿವರ್ಸಿಟಿಯ ಕುಲಪತಿ

> ಕ್ಯಾನ್ಸರ್ ರೋಗ ತಡೆಗಟ್ಟಲು ಹಾಗೂ ನಿಯಂತ್ರಣಕ್ಕೆ ಯೆನೆಪೊಯ ಡೀಮ್ಡ್ ಟು ಬಿ ವಿವಿ ಹಾಗೂ ಆಸ್ಪತ್ರೆಯ ಮೂಲಕ ನಡೆಯುತ್ತಿರುವ ಜಾಗೃತಿ ಕಾರ್ಯಕ್ರಮ ಉತ್ತಮ ಹೆಜ್ಜೆ ಎಂದು ಶ್ಲಾಘಿಸಿದರು.
>
> । ಆರ್.ವೆಂಕಟರಮಣನ್, ಮುಂಬೈಯ ಟಾಟಾ ಟ್ರಸ್ಟ್‌ನ ಆಡಳಿತ ಟ್ರಸ್ಟಿ

**ಪ್ರಥಮ ಒಡಂಬಡಿಕೆ**

ಟಾಟಾ ಟ್ರಸ್ಟ್ ಸರಕಾರಿ ಸಂಸ್ಥೆಗಳೊಂದಿಗೆ ಟಾಟಾ ಸಂಸ್ಥೆ ಒಡಂಬಡಿಕೆ ಮಾಡಿಕೊಂಡಿದ್ದರೂ ರಾಜ್ಯದಲ್ಲಿ ಖಾಸಗಿ ಸಂಸ್ಥೆಯ ಜತೆ ಮಾಡಿಕೊಂಡಿರುವ ಪ್ರಥಮ ಒಡಂಬಡಿಕೆ ಇದಾಗಿದೆ. ಈ ಒಡಂಬಡಿಕೆಯಿಂದ 120 ಹಾಸಿಗೆಗಳ ಕ್ಯಾನ್ಸರ್ ಚಿಕಿತ್ಸಾ ಕೇಂದ್ರವು ಯೆನೆಪೊಯ ಸಂಸ್ಥೆಯಲ್ಲಿ ಆರಂಭವಾಗಲಿದೆ ಎಂದು ಯೆನೆಪೊಯ ವಿವಿಯ ಉಪ ಕುಲಪತಿ ಡಾ. ವಿಜಯ ಕುಮಾರ್ ತಿಳಿಸಿದರು.

ATTESTED
Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.




ಕ್ಯಾನ್ಸರ್ ಜಾಗೃತಿ ಅಭಿಯಾನದ ಒಡಂಬಡಿಕೆಗೆ ಯೇನಪೊಯ ಅಬ್ದುಲ್ಲಾ ಕುಂಞ ಸಹಿ ಹಾಕಿ ದಾಖಲೆ ಹಸ್ತಾಂತರಿಸಿದರು.

ಕ್ಯಾನ್ಸರ್ ಜಾಗೃತಿ ಅಭಿಯಾನ

# ಟಾಟಾ ಟ್ರಸ್ಟ್ - ಯೇನಪೊಯ ವಿ.ವಿ. ಒಡಂಬಡಿಕೆ

ಉಳ್ಳಾಲ, ಏ. 24: ಕ್ಯಾನ್ಸರ್ ಜಾಗೃತಿ ಕಾರ್ಯದಲ್ಲಿ ಟಾಟಾ ಸಂಸ್ಥೆ ದಶಕಗಳಿಂದ ಕೈಜೋಡಿಸಿದ್ದು, ಗ್ರಾಮೀಣ ಜನರಿಗೆ ಸೇವೆ ಒದಗಿಸುವ ನಿಟ್ಟಿನಲ್ಲಿ ಖಾಸಗಿ ಟ್ರಸ್ಟ್‌ಗಳು, ವೈದ್ಯಕೀಯ ಆಸ್ಪತ್ರೆ ಹಾಗೂ ಶಿಕ್ಷಣ ಸಂಸ್ಥೆಗಳೊಂದಿಗೆ ಒಡಂಬಡಿಕೆ ನಡೆಸಲಾಗುತ್ತಿದೆ ಎಂದು ಟಾಟಾ ಟ್ರಸ್ಟ್‌ಗಳ ಟ್ರಸ್ಟಿ ಆರ್. ವೆಂಕಟರಮಣನ್ ಹೇಳಿದರು.

ಅವರು ದೇರಳಕಟ್ಟೆ ಯೇನಪೊಯ ಸ್ವಾಯತ್ತಗೊಳ್ಳಲಿರುವ ವಿ.ವಿ.ಯಲ್ಲಿ ಮಂಗಳವಾರ ಆರೋಗ್ಯ ಜಾಗೃತಿ ಪ್ರಚಾರ, ಕ್ಯಾನ್ಸರ್ ಕುರಿತ ರಾ. ವಿಚಾರ ಸಂಕಿರಣ ಮತ್ತು ಯೇನಪೊಯ ವಿ.ವಿ. ರಾ. ಸೇ. ಯೋಜನೆ ದೇಶಾದ್ಯಂತ ಆರಂಭಿಸಿರುವ ಕ್ಯಾನ್ಸರ್ ಜಾಗೃತಿ ಅಭಿಯಾನದ ಜತೆ ಟಾಟಾ ಟ್ರಸ್ಟ್ ಕೈಜೋಡಿಸುವ ಒಡಂಬಡಿಕೆಗೆ ಸಹಿ ಕಾರ್ಯಕ್ರಮದಲ್ಲಿ ಮಾತನಾಡಿದರು.

## ಸಾವಿನ ಪ್ರಮಾಣ ಇಳಿಕೆ

ಮಂಗಳೂರು ವಿ.ವಿ. ಕುಲಸಚಿವ ಪ್ರೊ। ಕೆ. ಭೈರಪ್ಪ ಮಾತನಾಡಿ, ಶಿಕ್ಷಣ ಸಂಸ್ಥೆ, ಆಸ್ಪತ್ರೆಗಳ ಸಮುದಾಯ ಔಷಧ ವಿಭಾಗ ಗ್ರಾಮೀಣ ಜನರನ್ನು ತಲುಪಿದಲ್ಲಿ ಕ್ಯಾನ್ಸರ್‌ಗೆ ತುತ್ತಾಗುವವರ ಹಾಗೂ ಸಾವನ್ನಪ್ಪುವವರ ಸಂಖ್ಯೆ ಕಡಿಮೆಗೊಳಿಸಬಹುದು ಎಂದರು.

ಯೇನಪೊಯ ವಿ.ವಿ. ಕುಲಾಧಿಪತಿ ಯೇನಪೊಯ ಅಬ್ದುಲ್ಲ ಕುಂಞ ಅಧ್ಯಕ್ಷತೆ ವಹಿಸಿದ್ದರು. ಡಾ। ವಿಶಾಲ್ ಆರ್., ಎ.ಎನ್. ಪೂಜಾರ, ಡಾ। ಗಣನಾಥ ಶೆಟ್ಟಿ ಎಕ್ಕಾರು, ವಿನೀತಾ ರೈ, ಡಾ। ಎಂ. ವಿಜಯಕುಮಾರ್, ಡಾ। ಜಿ. ಶ್ರೀಕುಮಾರ ಮೆನನ್ ಉಪಸ್ಥಿತರಿದ್ದರು. ಡಾ। ಅಭಯ್ ನಿರ್ಗುಡೆ ಸ್ವಾಗತಿಸಿ, ಡಾ। ವರುಣ್ ವಂದಿಸಿದರು.

ದಾಂಪತ್ಯ ಜೀವನದ ಬೆ



ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN UDAYAVANNI" DATED ON 25.04.18

# ಕ್ಯಾನ್ಸರ್ ಜಾಗೃತಿ ಅಭಿಯಾನದಲ್ಲಿ ಟಾಟಾ ಟ್ರಸ್ಟ್-ಯೆನೆಪೋಯ ಒಡಂಬಡಿಕೆ



■ ವಿಕ ಸುದ್ದಿಲೋಕ ತೊಕ್ಕೊಟ್ಟು

ಕ್ಯಾನ್ಸರ್ ಜಾಗೃತಿ ಕಾರ್ಯದಲ್ಲಿ ಟಾಟಾ ಸಂಸ್ಥೆ ದಶಕಗಳಿಂದ ಕೈಜೋಡಿಸಿದ್ದು, ದೇಶಾದ್ಯಂತ ಕ್ಯಾನ್ಸರ್ ಪತ್ತೆಹಚ್ಚುವಿಕೆ ಹಾಗೂ ವೈದ್ಯಕೀಯ ಕೇಂದ್ರವನ್ನು ಸ್ಥಾಪಿಸಿದೆ. ಗ್ರಾಮೀಣ ಭಾಗದವರಿಗೆ ಟ್ರಸ್ಟಿನ ಸೇವೆ ಒದಗಿಸುವ ಸಲುವಾಗಿ ಖಾಸಗಿ ಟ್ರಸ್ಟ್‌ಗಳು ಹಾಗೂ ವೈದ್ಯಕೀಯ ಆಸ್ಪತ್ರೆ ಹಾಗೂ ಶಿಕ್ಷಣ ಸಂಸ್ಥೆಗಳೊಂದಿಗೆ ಒಡಂಬಡಿಕೆಗಳನ್ನು ನಡೆಸಲಾಗುತ್ತಿದೆ ಎಂದು ಟಾಟಾ ಟ್ರಸ್ಟ್‌ಗಳ ಟ್ರಸ್ಟಿ ಆರ್. ವೆಂಕಟರಮಣನ್ ಹೇಳಿದರು.

ದೇರಳಕಟ್ಟೆ ಯೆನೆಪೋಯ ಸ್ವಾಯತ್ತೆಗೊಳ್ಳಲಿರುವ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ಮೆಡಿಕಲ್ ಕಾಲೇಜಿನ ಆಡಿಟೋರಿಯಂನಲ್ಲಿ ಜರುಗಿದ ಆರೋಗ್ಯ ಜಾಗೃತಿ ಪ್ರಚಾರ, ಕ್ಯಾನ್ಸರ್ ಆರಂಭಿಕ ಪತ್ತೆಹಚ್ಚುವಿಕೆ, ತಡೆಗಟ್ಟುವಿಕೆ ಹಾಗೂ ನಿಯಂತ್ರಣದ ಕುರಿತಾದ ರಾಷ್ಟ್ರೀಯ ವಿಚಾರಸಂಕಿರಣ ಮತ್ತು ಯೆನೆಪೋಯ ವಿವಿಯ ರಾಷ್ಟ್ರೀಯ ಸೇವಾ ಯೋಜನೆ ದೇಶಾದ್ಯಂತ ಆರಂಭಿಸಿರುವ ಕ್ಯಾನ್ಸರ್ ಜಾಗೃತಿ ಅಭಿಯಾನದ ಜತೆಗೆ ಟಾಟಾ ಟ್ರಸ್ಟ್ ಕೈಜೋಡಿಸುವ ಒಡಂಬಡಿಕೆಗೆ ಸಹಿ ಹಾಕುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಬೆಂಗಳೂರು ಮಹಾನಗರಪಾಲಿಕೆ ಆಡಳಿತದ ನಿರ್ದೇಶಕ ಡಾ. ವಿಶಾಲ್ ಆರ್ ಮಾತನಾಡಿ, ಯೆನೆಪೋಯ ಸಂಸ್ಥೆ ಹೊಂದಿರುವ ಸುಸಜ್ಜಿತ ಪ್ರಯೋ ಗಾಲಯ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಮುಂದಿನ ದಿನಗಳಲ್ಲಿ ರಾಜ್ಯ ಸರಕಾರ ಇಂತಹ ಕಾರ್ಯದಲ್ಲಿ ಸಂಸ್ಥೆ ಜತೆಗೆ ಕೈಜೋಡಿಸುವ ಕುರಿತು ಚಿಂತಿಸುವುದಾಗಿ ತಿಳಿಸಿದರು.

ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಕೆ. ಭೈರಪ್ಪ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಯೆನೆಪೋಯ ಸ್ವಾಯತ್ತೆಗೊಳ್ಳಲಿರುವ ವಿವಿ ಕುಲಾಧಿಪತಿ ಯೆನೆಪೋಯ ಅಬ್ದುಲ್ಲ ಕುಂಞಿ ಮಾತನಾಡಿ, ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮದಲ್ಲಿ ಯೆನೆಪೋಯ ಸಂಸ್ಥೆ ಹಲವು ವರ್ಷಗಳಿಂದ ಕಾರ್ಯಾಚರಿಸುತ್ತಿದೆ. ಗ್ರಾಮೀಣ ಭಾಗದ ಜನರಿಗೆ ಪರಿಣಾಮಕಾರಿಯಾಗಿ ಜಾಗೃತಿಯನ್ನು ಮುಟ್ಟಿಸುವಂತಹ ಕಾರ್ಯಗಳು ಆಗುತ್ತಿವೆ ಎಂದರು.

ಬೆಂಗಳೂರು ರಾಷ್ಟ್ರೀಯ ಸೇವಾ ಯೋಜನೆ ಪ್ರಾದೇಶಿಕ ನಿರ್ದೇಶನಾಲಯದ ನಿರ್ದೇಶಕ ಎ.ಯನ್. ಪೂಜಾರ, ರಾಜ್ಯ ರಾಷ್ಟ್ರೀಯ ಸೇವಾ ಯೋಜನೆಯ ಯುವ ಸಬಲೀಕರಣ ಮತ್ತು ಕ್ರೀಡಾ ವಿಭಾಗದ ಅಧಿಕಾರಿ ಡಾ. ಗಣನಾಥ ಶೆಟ್ಟಿ ಎಕ್ಕಾರ್, ಮಂಗಳೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾಧಿಕಾರಿ ವಿನೀತಾ ರೈ, ಯೆನೆಪೋಯ ಸ್ವಾಯತ್ತೆ ಆಗಲಿರುವ ವಿವಿ ಉಪಕುಲ ಪತಿ ಡಾ. ಎಂ.ವಿಜಯಕುಮಾರ್ ಹಾಗೂ ಕುಲಸಚಿವ ಡಾ. ಜಿ. ಶ್ರೀಕುಮಾರ್ ಮೆನನ್ ಉಪಸ್ಥಿತರಿದ್ದರು.

ಯೆನೆಪೋಯ ಸಮುದಾಯ ಔಷಧ ವಿಭಾಗ ಮುಖ್ಯಸ್ಥ ಡಾ. ಭಯ್ ಎಸ್. ನಿರ್ಗುಡೆ ಸ್ವಾಗತಿಸಿದರು. ಡಾ.ವರುಣ್. ಯನ್ ವಂದಿಸಿದರು.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

*APPEARED IN" THE NEW INDIAN EXPRESS" 27.04.2018*

# Yenepoya, Tata Trust sign LoI

Mangaluru: A national symposium on Cancer Prevention and Control by Health Promotion and Early Detection was held at Yenepoya (Deemed to be University), Deralakatte, in Mangaluru on Tuesday.

R Venkataramanan, Managing Trustee, Tata Trusts, was the chief guest made reference of 125 years of charitable services of Tata Trust. Dr Vishal R, Director, Municipal Administration, assured all possible support to the cancer prevention programme. Prof K. Byrappa, Vice-Chancellor of Mangalore University spoke on the importance of cancer prevention, detection and management at the early stage. Varadachari, Indian oil Corporation shared his experiences regarding cancer prevention on programme.

A CD on cancer awareness programme brought out as part of cancer awareness outreach programme of Yenepoya was released on this occasion by R Venkatramanan. Y Abdulla Kunhi, Chancellor of Yenepoya felicitated R. Venkataramanan, Prof K. Byrappa, Dr Vishal R, Varadachari and Anandhakumar.

A letter of intent (LOI) was signed between Tata Trusts and Yenepoya to start and operate a comprehensive cancer center, in Yenepoya campus with 120 beds. This facility will work in conjunction with the 1000- bedded Yenepoya Medical College Hospital.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN "VIJAYAVANI" DTD 7.2.17

ಡಿ, 9

# ಇಂದು ಯೇನೆಪೊಯ ಇಟಲಿ ವಿವಿ ಮಧ್ಯೆ ಒಪ್ಪಂದ

ಉಳ್ಳಾಲ: ದೇರಳಕಟ್ಟೆ ಯೇನೆಪೊಯ ವಿವಿಯ ಓರ್ಥೋಡೊಂಟಿಕ್ಸ್ ಮತ್ತು ಡೆಂಟೋಫೇಶಿಯಲ್ ಓರ್ಥೋಪೆಡಿಕ್ಸ್ ವಿಭಾಗ ಹಾಗೂ ಇಟಲಿ ರೋಮ್ನ ಮಿಲಾನೊ ವಿಶ್ವವಿದ್ಯಾಲಯದ ಓರ್ಥೋಡೊಂಟಿಕ್ಸ್ ಮತ್ತು ಡೆಂಟೋಫೇಶಿಯಲ್ ಓರ್ಥೋಪೆಡಿಕ್ಸ್ ವಿಭಾಗದ ಮಧ್ಯೆ ವೈದ್ಯಕೀಯ ಶಿಕ್ಷಣ ಸಂಬಂಧಿ ಒಪ್ಪಂದ ಫೆ.7ರಂದು ಯೇನೆಪೊಯ ವಿವಿಯಲ್ಲಿ ನಡೆಯಲಿದೆ. ಮಿಲಾನೊ ಸಾನ್ ಪೌಲೋ ಆಸ್ಪತ್ರೆ ಸಂಶೋಧನಾ ಸಹಾಯಕಿ ಡಾ.ಮರಿಯ ಕೊಸ್ಟಾಂಝು ಮಿಯಾಝಿನಿ ದಿ ಸೆಸ್ಸೆಲ್, ಸರ್ಜನ್ ಡಾ.ಫ್ಯಾಬಿಯೋ ಮಝೊಲೋನಿ, ಮುಖ್ಯ ವ್ಯವಸ್ಥಾಪಕ ಡಾ.ಗಾರ್ಗಿಯೋ ನೊವೆಲ್ಲಿ, ಯುಒಸಿ ಮಾಕ್ಸಿಲ್ಲೋ ಫೇಶಿಯಲ್ ಸರ್ಜರಿ ನಿರ್ದೇಶಕ ಡಾ.ಡೊಮಿನಿಕೊ ಸ್ಕೊಪೆಲಿಟ್ಟಿ, ಯೇನೆಪೊಯ ವಿವಿ ಕುಲಾಧಿಪತಿ ಯೇನೆಪೊಯ ಅಬ್ದುಲ್ಲ ಕುಂಞಿ ಭಾಗವಹಿಸಲಿದ್ದಾರೆ.

6!

ಂಡ
ಗುನಿ
ದಲ್ಲಿ

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN "VIJAYAVANI" DTD 18.03.2016

# ಇಂದು ಯೇನೆಪೊಯ- ಜರ್ಮನ್ ವಿವಿ ಒಪ್ಪಂದ

ಮಂಗಳೂರು: ದಕ್ಷಿಣ ಕನ್ನಡದ ಯೇನೆಪೊಯ ಹಾಗೂ ಜರ್ಮನಿಯ ಜೋಹನೆಸ್ ಗುಟೆನ್ ಬರ್ಗ್ ವಿಶ್ವವಿದ್ಯಾಲಯಗಳು ನೀತಿಶಾಸ್ತ್ರ ಕೇಂದ್ರಕ್ಕೆ ಸಂಬಂಧಿಸಿ ಪರಸ್ಪರ ಮಾಡಿಕೊಂಡಿರುವ ಒಡಂಬಡಿಕೆಯ ನವೀಕರಣ ಹಾಗೂ 'ವಿಸಿಬಿಲಿಟಿ ಪ್ರೋಗ್ರಾಂ' ಮಾ.18ರಂದು ಬೆಳಗ್ಗೆ 10ಕ್ಕೆ ದೇರಳಕಟ್ಟೆಯಲ್ಲಿರುವ ಯೇನೆಪೊಯ ವಿವಿಯಲ್ಲಿ ನಡೆಯಲಿದೆ.

ಒಪ್ಪಂದ ನವೀಕರಣ ಸಂದರ್ಭ ಸಂಸ್ಥೆಯ ಡೆಂಟಲ್, ಫಿಸಿಯೋಥೆರಪಿ, ನರ್ಸಿಂಗ್ ವಿದ್ಯಾರ್ಥಿಗಳಿಗೆ ಕೋರ್ಸು ವಿಸ್ತರಣೆ ನಡೆಸಲು ಉದ್ದೇಶಿಸಲಾಗಿದೆ ಎಂದು ಯೇನೆಪೊಯ ವಿವಿ ಕುಲಸಚಿವ ಡಾ. ರಘುವೀರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಐದು ವರ್ಷಗಳ ಹಿಂದೆ ಯೇನೆಪೊಯ ವಿವಿಯಲ್ಲಿ ದೇಶದಲ್ಲೇ ಪ್ರಥಮ ಬಾರಿಗೆ ನೀತಿ ಶಾಸ್ತ್ರ ಕೇಂದ್ರ ಆರಂಭಿಸಲಾಗಿದ್ದು, 72ಕ್ಕಿಂತ ಅಧಿಕ ಮಂದಿ ಆರೋಗ್ಯ ಸೇವೆ, ವಿಜ್ಞಾನ ಮತ್ತು ದೇವತಾ ಶಾಸ್ತ್ರ ಹಿನ್ನೆಲೆಯವರು ಈ ಕೋರ್ಸುಗಳ ತರಬೇತಿ ಪಡೆದಿದ್ದಾರೆ. ಆರಂಭದಲ್ಲಿ 2 ಸ್ನಾತಕೋತ್ತರ ಕೋರ್ಸುಗಳನ್ನು ಆರಂಭಿಸಲಾಗಿತ್ತು ಎಂದರು. ನೀತಿ ಶಾಸ್ತ್ರ ಕೇಂದ್ರದ ನಿರ್ದೇಶಕಿ ಡಾ.ವೀಣಾ ವಾಸ್ವಾನಿ, ಜರ್ಮನ್ ವಿಶ್ವ ವಿದ್ಯಾನಿಲಯದ ಪರಿಣಿತೆ ಡಾ.ಮೆಡಲಿನ್ ಮೇ ಉಪಸ್ಥಿತರಿದ್ದರು.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN "DECCAN HERALD" DTD 18.03.2016

# Yenepoya, German universities to renew MoU today

MANGALURU, DHNS: The Yenepoya University, in association with Johannes Gutenberg University (Germany), will organise a visibility programme as a part of successful completion of five years collaboration between the two universities, at Yenepoya university in Deralakatte on Friday at 10 am.

Speaking to mediapersons on Thursday, Yenepoya University Registrar Dr C V Raghuveer said that five years ago in February 2011, the Yenepoya university took the step to create a dedicated centre, the Centre for Ethics.

Stating that the Centre has been innovative and creative, he said it runs two post graduate diploma courses: Biomedical ethics and clinical ethics, both courses being unique in the country. The PG diploma in bioethics and medical ethics is the flagship course conceived and implemented by Dr Vina Vasvani (centre director) after she obtained her Masters in Bioethics from the Erasmus Mundus Mobility Program in Europe (2007-08), he said, adding that the flagship course has empowered more than 72 trained professionals from the background of health care, theology and science background, in the last five years.

Since there is a lack of expertise in clinical ethics, Johannes Gutenberg University of Mainz (Germany) Department of History, Philosophy and Ethics of Medicine Director Dr Norbert W Paul accepted to make annual trips to India to teach clinical ethics, informed Dr Raghuveer. "The joint academic venture has created a potential resource pool of more than 20 clinical ethicists," he said.

He also said that the student exchange program has seen more than 30 students from Germany at Yenepoya campus. In order to enhance the activities of collaboration, the two universities are renewing the MoU for a further period of five years on Friday, he added.

ATTESTED


Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

# APPEARED IN "VARATHA BHARATHI" DTD 19.03.2016

1

## ನೀತಿಶಾಸ್ತ್ರ ಕೇಂದ್ರ ವಿಸ್ತರಣೆ

# ಯೆನೆಪೊಯ- ಜರ್ಮನಿಯ ಜೊಹನೆಸ್ ಗುಟೆನ್‌ಬರ್ಗ್ ವಿವಿ ಒಪ್ಪಂದ



ಉಳ್ಳಾಲ, ಮಾ.18: ಪರಸ್ಪರ ವಿದ್ಯಾರ್ಥಿ ಹಾಗೂ ಬೋಧಕ ಸಿಬ್ಬಂದಿ ವಿನಿಮಯ, ಸಂಶೋಧನೆ ಸಹಭಾಗಿತ್ವದಲ್ಲಿ ಶೈಕ್ಷಣಿಕ ಕೋರ್ಸ್‌ಗಳನ್ನು ನಡೆಸುವುದಕ್ಕಾಗಿ ನೀತಿಶಾಸ್ತ್ರ ಕೇಂದ್ರವನ್ನು ಮುಂದಿನ ಐದು ವರ್ಷಗಳಿಗೆ ವಿಸ್ತರಿಸುವ ಒಪ್ಪಂದಗಳಿಗೆ ಯೆನೆಪೊಯ ಮತ್ತು ಜರ್ಮನಿಯ ಜೊಹನೆಸ್ ಗುಟೆನ್ ಬರ್ಗ್ ವಿವಿ ಶುಕ್ರವಾರ ದೇರಳಕಟ್ಟೆ ಯೆನೆಪೊಯ ವೈದ್ಯಕೀಯ ಕಾಲೇಜಿನ ಉಪನ್ಯಾಸ ಕೇಂದ್ರದಲ್ಲಿ ಜರಗಿದ 'ಗೋಚರತಾ' ಕಾರ್ಯಕ್ರಮದಲ್ಲಿ ಸಹಿ ಹಾಕಿದೆ.

ಈ ಸಂದರ್ಭ ಮಾತನಾಡಿದ ಜರ್ಮನಿಯ ಜೊಹನೆಸ್ ಗುಟೆನ್ ಬರ್ಗ್ ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ನಿರ್ದೇಶಕ ಡಾ.ನೋಬರ್ಟ್ ಪೌಲ್, ವಿದ್ಯಾಸಂಸ್ಥೆಗಳು ಹಣ ಮಾಡುವ ಕಂಪೆನಿಗಳಾಗದೆ, ಮಾನವೀಯತೆಗೆ ಒತ್ತು ಕೊಡುವ ಸಂಸ್ಥೆಗಳಾಗಬೇಕಿದೆ. ಈ ನಿಟ್ಟಿನಲ್ಲಿ ಯೆನೆಪೊಯ ವಿಶ್ವವಿದ್ಯಾನಿಲಯದ ಕಾರ್ಯವೈಖರಿ ಶ್ಲಾಘನೀಯ ಎಂದು ಹೇಳಿದರು.

ಯೆನೆಪೊಯ ವಿಶ್ವವಿದ್ಯಾಲಯದ ಕುಲಸಚಿವ ಡಾ.ರಘುವೀರ್ ಸಿ.ವಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವೈದ್ಯಕೀಯ ಕ್ಷೇತ್ರದಲ್ಲಿ ನೀತಿಶಾಸ್ತ್ರದ ಅರಿವು ಮತ್ತು ಪಾಲನೆಯನ್ನು ವಿಸ್ತಾರಗೊಳಿಸುವ ಸಾಧ್ಯತೆಗಳ ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ನೇತ್ರಶಾಸ್ತ್ರ ವಿಭಾಗದ ಪ್ರೊ.ಉಮಾ ಕುಲಕರ್ಣಿ ನಡೆಸಿಕೊಟ್ಟರು.

ಯೆನೆಪೊಯ ವೈದ್ಯಕೀಯ ಕಾಲೇಜಿನ ಡೀನ್ ಡಾ.ಗುಲಾಂ ಜಿಲಾನಿ ಖಾದಿರಿ ಸ್ವಾಗತಿಸಿದರು.

ನೀತಿಶಾಸ್ತ್ರ ಕೇಂದ್ರದ ನಿರ್ದೇಶಕಿ ಡಾ.ವೀಣಾ ವಾಸ್ವಾನಿ ಕಾರ್ಯಕ್ರಮ ನಿರೂಪಿಸಿದರು. ಯೆನೆಪೊಯ ದಂತ ಕಾಲೇಜಿನ ವೈದ್ಯ ಡಾ.ಹರಿಕಿಶೋರ್ ವಂದಿಸಿದರು.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN "UDAYAVANI" DTD 20.03.2016

# ಯೇನೆಪೊಯ ವಿವಿ ಒಪ್ಪಂದ



ಯೇನೆಪೊಯ- ಜೋಹಾನ್ಸ್ ಗುಟೆನ್‌ಬರ್ಗ್ ವಿಶ್ವವಿದ್ಯಾಲಯ ಒಪ್ಪಂದ ಮುಂದುವರಿಕೆ ಸಂದರ್ಭ ಭಾಗವಹಿಸಿದ ಜರ್ಮನಿ ತಂಡ.

ಉಳ್ಳಾಲ: ಯೇನೆಪೊಯ ವಿಶ್ವವಿದ್ಯಾಲಯ ಹಾಗೂ ಜರ್ಮನಿಯ ಜೋಹಾನ್ಸ್ ಗುಟೆನ್‌ಬರ್ಗ್ ವಿಶ್ವವಿದ್ಯಾಲಯದ ನಡುವೆ ಐದು ವರ್ಷಗಳ ಹಿಂದೆ ನಡೆದಿದ್ದ ವೈದ್ಯಕೀಯ ನೀತಿ ಶಾಸ್ತ್ರ, ಇತಿಹಾಸ ಹಾಗೂ ತತ್ವಶಾಸ್ತ್ರ ಶಿಕ್ಷಣ ಸಂಬಂಧಿ ಒಪ್ಪಂದವನ್ನು ಮುಂದಿನ ಐದು ವರ್ಷಗಳಿಗೆ ನವೀಕರಿಸಲಾಗಿದೆ.

ಯೇನೆಪೊಯ ವೈದ್ಯಕೀಯ ಕಾಲೇಜು ಸಭಾಂಗಣದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಕರಾರು ಪತ್ರ ವಿನಿಮಯ ಮಾಡಿಕೊಳ್ಳಲಾಯಿತು. ಈ ಸಂದರ್ಭ ಮಾತನಾಡಿದ ಜೋಹಾನ್ಸ್ ಗುಟೆನ್‌ಬರ್ಗ್ ವಿವಿ ಇತಿಹಾಸ ವಿಭಾಗ ನಿರ್ದೇಶಕ ಡಾ.ನಾಬರ್ಟ್ ಡಬ್ಲ್ಯು. ಪಾಲ್, ವೈದ್ಯಕೀಯ ಸಂಸ್ಥೆಗಳು ಮಾನವೀಯ ಗುಣ ಹೊಂದಿರಬೇಕಿದ್ದು ಆರೋಗ್ಯ ಮತ್ತು ಸಾಮಾಜಿಕ ಮೌಲ್ಯ ಎತ್ತಿ ಹಿಡಿಯುವ ಕೆಲಸ ಮಾಡಬೇಕು. ಈ ನಿಟ್ಟಿನಲ್ಲಿ ಎರಡು ವಿವಿಗಳು ಮಾಡಿಕೊಂಡಿರುವ ಒಪ್ಪಂದ ಯಶಸ್ವಿಯಾಗಿದೆ ಎಂದು ತಿಳಿಸಿದರು.

ಯೇನೆಪೊಯ ವಿವಿ ಕುಲಸಚಿವ ಡಾ.ಸಿ.ವಿ.ರಘುವೀರ್ ಮಾತನಾಡಿ, ಎರಡು ವಿಶ್ವವಿದ್ಯಾಲಯಗಳ ನಡುವೆ ಐದು ವರ್ಷಗಳ ಒಪ್ಪಂದದಲ್ಲಿ ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಪರಸ್ಪರ ವಿಚಾರ ವಿನಿಮಯದ ಮೂಲಕ ಅನುಭವ ಪಡೆಯಲು ಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ ಈ ಬಾರಿ ದಂತ ಕಾಲೇಜಿಗೂ ಒಪ್ಪಂದ ವಿಸ್ತರಿಸಲಾಗುತ್ತಿದೆ ಎಂದರು. ಯೇನೆಪೊಯ ವೈದ್ಯಕೀಯ ಕಾಲೇಜಿನ ಡೀನ್ ಡಾ.ಗುಲಾಂ ಜೀಲಾನಿ ಖಾದಿರಿ ಸ್ವಾಗತಿಸಿದರು. ಡಾ.ಉಮಾ ಕುಲಕರ್ಣಿ ಐದು ವರ್ಷದ ಕಾರ್ಯಕ್ರಮ ವರದಿ ಮಂಡಿಸಿದರು. ಡಾ.ಹರಿ ಕಿಶೋರ್ ಭಟ್ ವಂದಿಸಿದರು. ಡಾ.ವೀಣಾ ವಾಸ್ವಾನಿ ಕಾರ್ಯಕ್ರಮ ನಿರೂಪಿಸಿದರು.


ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka

APPEARED IN "VARATHA BHARATHI" DTD 17.06.2016

5

# ಯೆನೆಪೊಯ ವಿವಿ-ನಾರಾಯಣ ಆಸ್ಪತ್ರೆ ನಡುವೆ ಒಪ್ಪಂದ




ಮಂಗಳೂರು, ಜೂ.16: ಯೆನೆಪೊಯ ವಿಶ್ವವಿದ್ಯಾನಿಲಯದ ಸೆಂಟರ್ ಫಾರ್ ಎಥಿಕ್ಸ್ ಹಾಗೂ ನೆಲ್ಲೂರಿನ ನಾರಾಯಣ ಡೆಂಟಲ್ ಕಾಲೇಜು ಮತ್ತು ಆಸ್ಪತ್ರೆ ಮತ್ತು ನಾರಾಯಣ ನರ್ಸಿಂಗ್ ಕಾಲೇಜು ನಡುವೆ ಪರಸ್ಪರ ತಿಳುವಳಿಕೆ ಒಪ್ಪಂದಕ್ಕೆ ಗುರುವಾರ ಸಹಿ ಮಾಡಲಾಯಿತು.

ನಾರಾಯಣ ಸಂಸ್ಥೆಯಲ್ಲಿ ಎಥಿಕ್ಸ್ ಸೆಂಟರ್ ಸ್ಥಾಪಿಸಲು, ಅಲ್ಲಿಯ ಸಿಬ್ಬಂದಿ ವರ್ಗಕ್ಕೆ ತರಬೇತಿ, ಸಂಶೋಧನೆ ಮತ್ತು ಪಬ್ಲಿಕೇಶನ್ ಹಾಗೂ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಯೆನೆಪೊಯ ವಿಶ್ವವಿದ್ಯಾನಿಲಯವು ಸಲಹೆ ಹಾಗೂ ಸಹಕಾರವನ್ನು ನೀಡುವುದು ಈ ಒಡಂಬಡಿಕೆಯ ಮುಖ್ಯ ಉದ್ದೇಶವಾಗಿದೆ.

ಯೆನೆಪೊಯ ವಿಶ್ವವಿದ್ಯಾನಿಲಯದ ಸೆಂಟರ್ ಫಾರ್ ಎಥಿಕ್ಸ್ ಫೆಬ್ರವರಿ 2011ರಲ್ಲಿ ಸ್ಥಾಪನೆಗೊಂಡಿದೆ. ಎಥಿಕ್ಸ್ ಶಿಕ್ಷಣದ ವಿಷಯದಲ್ಲಿ ಸಂಶೋಧನೆ ಮತ್ತು ವಿವಿಧ ಶೈಕ್ಷಣಿಕ ಚಟುವಟಿಕೆಯಲ್ಲಿ ಕಾರ್ಯನಿರತವಾಗಿದ್ದು, ಭಾರತದ ವೈದ್ಯಕೀಯ ಕಾಲೇಜುಗಳಲ್ಲಿ ಮೊಟ್ಟ ಮೊದಲ ಎಥಿಕ್ಸ್ ಕೇಂದ್ರ ಎಂದು ಹೆಗ್ಗಳಿಕೆ ಪಡೆದಿದೆ. ವೈದ್ಯಕೀಯ ರಂಗದಲ್ಲಿ ಮೆಡಿಕಲ್ ಎಥಿಕ್ಸ್ ಮತ್ತು ಬಯೋ ಎಥಿಕ್ಸ್ ವಿಷಯಗಳನ್ನು ಅಳವಡಿಸಿ ಶೈಕ್ಷಣಿಕ ಕಾರ್ಯಕ್ರಮವನ್ನು, ಸಂಶೋಧನೆ ಮತ್ತು ಸಾಂಸ್ಕೃತಿಕ ವಿನಿಮಯ ಮಾಡುವ ಉದ್ದೇಶದಿಂದ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ.

ನಾರಾಯಣ ಡೆಂಟಲ್ ಕಾಲೇಜಿನ ಓರಲ್ ಮೆಡಿಸಿನ್ ಮತ್ತು ಮಾಕ್ಸಿಲೋ ಫೇಶಿಯಲ್ ಇಮೇಜಿಯೋಲೊಜಿಯ ಪ್ರೊಫೆಸರ್ ಮತ್ತು ವಿಭಾಗ ಮುಖ್ಯಸ್ಥ ಡಾ. ಕಣ್ಣನ್, ಯೆನೆಪೊಯ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್, ಡಾ. ಸಿ.ವಿ.ರಘುವೀರ್, ಸೆಂಟರ್ ಫಾರ್ ಎಥಿಕ್ಸ್‌ನ ನಿರ್ದೇಶಕಿ ಡಾ. ವೀಣಾ ವಾಸ್ವಾನಿ ಒಡಂಬಡಿಕೆಗೆ ಸಹಿ ಮಾಡಿದರು.


ಯೆನೆಪೊಯ ವಿಶ್ವವಿದ್ಯಾನಿಲಯದ ಅಡಿಶನಲ್ ರಿಜಿಸ್ಟ್ರಾರ್ ಡಾ. ಶ್ರೀಕುಮಾರ್ ನಾಯರ್, ಕಣ್ಣೂರು ಮತ್ತು ಕ್ಯಾಲಿಕಟ್ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಪ್ರೊಫೆಸರ್ ಅಬ್ದುರ್ರಹ್ಮಾನ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ATTESTED
Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN "VIJAYA VANI" DTD 17.06.2016

# ಯೇನೆಪೊಯ ವಿವಿಯಲ್ಲಿ ತಿಳಿವಳಿಕೆ ಒಪ್ಪಂದಕ್ಕೆ ಸಹಿ

ವಿಜಯವಾಣಿ ಚಿತ್ರ




ಯೇನೆಪೊಯ ವಿವಿಯಲ್ಲಿ ಗುರುವಾರ ತಿಳಿವಳಿಕೆ ಒಪ್ಪಂದ ವಿನಿಮಯ ನಡೆಯಿತು.

■ ವಿಜಯವಾಣಿ ಸುದ್ದಿಜಾಲ ಉಳ್ಳಾಲ

ಯೇನೆಪೊಯ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಎಥಿಕ್ಸ್, ನೆಲ್ಲೂರಿನ ನಾರಾಯಣ ದಂತ ಕಾಲೇಜು ಮತ್ತು ಆಸ್ಪತ್ರೆ ಹಾಗೂ ನಾರಾಯಣ ನರ್ಸಿಂಗ್ ಕಾಲೇಜು ನಡುವೆ ಪರಸ್ಪರ ತಿಳಿವಳಿಕೆ ಒಪ್ಪಂದಕ್ಕೆ ಯೇನೆಪೊಯ ವಿವಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಗುರುವಾರ ಸಹಿ ಹಾಕಿ ವಿನಿಮಯ ಮಾಡಿಕೊಳ್ಳಲಾಯಿತು.

ನಾರಾಯಣ ಸಂಸ್ಥೆಯಲ್ಲಿ ಎಥಿಕ್ಸ್ ಸೆಂಟರ್ ಸ್ಥಾಪನೆ, ಅಲ್ಲಿನ ಸಿಬ್ಬಂದಿ ವರ್ಗಕ್ಕೆ ತರಬೇತಿ, ಸಂಶೋಧನೆ, ಪಬ್ಲಿಕೇಶನ್ ಹಾಗೂ ಹೊಸ ಕೋರ್ಸ್ ಪ್ರಾರಂಭಿಸಲು ಯೇನೆಪೊಯ ವಿಶ್ವವಿದ್ಯಾಲಯದಿಂದ ಸಲಹೆ ಮತ್ತು ಸಹಕಾರ ನೀಡುವುದು ಒಡಂಬಡಿಕೆಯ ಮುಖ್ಯ ಉದ್ದೇಶವಾಗಿದೆ.

ಯೇನೆಪೊಯ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಎಥಿಕ್ಸ್ ಫೆಬ್ರವರಿ 2011ರಲ್ಲಿ ಸ್ಥಾಪನೆಗೊಂಡಿದ್ದು, ಶಿಕ್ಷಣದ ವಿಷಯದಲ್ಲಿ ಸಂಶೋಧನೆ ಮತ್ತು ವಿವಿಧ ಶೈಕ್ಷಣಿಕ ಚಟುವಟಿಕೆಯಲ್ಲಿ ಕಾರ್ಯನಿರತವಾಗಿದೆ. ಭಾರತದ ವೈದ್ಯಕೀಯ ಕಾಲೇಜುಗಳಲ್ಲಿ ಮೊಟ್ಟಮೊದಲ ಎಥಿಕ್ಸ್ ಕೇಂದ್ರ ಎನ್ನುವ ಹೆಗ್ಗಳಿಕೆಯನ್ನೂ ಹೊಂದಿದೆ. ವೈದ್ಯಕೀಯ ರಂಗದಲ್ಲಿ ಮೆಡಿಕಲ್ ಎಥಿಕ್ಸ್ ಮತ್ತು ಬಯೋ ಎಥಿಕ್ಸ್ ವಿಷಯಗಳನ್ನು ಅಳವಡಿಸಿ ಶೈಕ್ಷಣಿಕ ಕಾರ್ಯಕ್ರಮ, ಸಂಶೋಧನೆ ಮತ್ತು ಸಾಂಸ್ಕೃತಿಕ ವಿನಿಮಯ ಮಾಡುವ ಉದ್ದೇಶದಿಂದ ಕೇಂದ್ರ ಸ್ಥಾಪಿಸಲಾಗಿದೆ.


ನಾರಾಯಣ ಡೆಂಟಲ್ ಕಾಲೇಜಿನ ಓರಲ್ ಮೆಡಿಸಿನ್ ಮತ್ತು ಮಾಕ್ಸಿಲೋಫೇಶಿಯಲ್ ಇಮೇಜಿಯೋಲೊಜಿ ವಿಭಾಗ ಮುಖ್ಯಸ್ಥ ಡಾ.ಕಣ್ಣನ್, ಯೇನೆಪೊಯ ವಿವಿ ಕುಲಸಚಿವ ಡಾ.ಸಿ.ವಿ.ರಘುವೀರ್ ಹಾಗೂ ಸೆಂಟರ್ ಫಾರ್ ಎಥಿಕ್ಸ್‌ನ ನಿರ್ದೇಶಕಿ ಡಾ.ವೀಣಾ ವಾಸ್ವಾನಿ ಒಡಂಬಡಿಕೆಗೆ ಸಹಿ ಮಾಡಿದರು. ಯೇನೆಪೊಯ ವಿವಿ ಹೆಚ್ಚುವರಿ ಕುಲಸಚಿವ ಡಾ.ಶ್ರೀಕುಮಾರ್ ನಾಯರ್, ಕಣ್ಣೂರು, ಕ್ಯಾಲಿಕಟ್ ವಿವಿ ನಿಕಟ ಪೂರ್ವ ಕುಲಪತಿ ಪ್ರೊ.ಅಬ್ದುಲ್ ರಹಮಾನ್ ಉಪಸ್ಥಿತರಿದ್ದರು.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN "VARATHA BHARATHI" DTD 17.06.2016

# ಯೆನೆಪೊಯ ವಿವಿ-ನಾರಾಯಣ ಆಸ್ಪತ್ರೆ ನಡುವೆ ಒಪ್ಪಂದ



ಮಂಗಳೂರು, ಜೂ.16: ಯೆನೆಪೊಯ ವಿಶ್ವವಿದ್ಯಾನಿಲಯದ ಸೆಂಟರ್ ಫಾರ್ ಎಥಿಕ್ಸ್ ಹಾಗೂ ನೆಲ್ಲೂರಿನ ನಾರಾಯಣ ಡೆಂಟಲ್ ಕಾಲೇಜು ಮತ್ತು ಆಸ್ಪತ್ರೆ ಮತ್ತು ನಾರಾಯಣ ನರ್ಸಿಂಗ್ ಕಾಲೇಜು ನಡುವೆ ಪರಸ್ಪರ ತಿಳುವಳಿಕೆ ಒಪ್ಪಂದಕ್ಕೆ ಗುರುವಾರ ಸಹಿ ಮಾಡಲಾಯಿತು.

ನಾರಾಯಣ ಸಂಸ್ಥೆಯಲ್ಲಿ ಎಥಿಕ್ಸ್ ಸೆಂಟರ್ ಸ್ಥಾಪಿಸಲು, ಅಲ್ಲಿಯ ಸಿಬ್ಬಂದಿ ವರ್ಗಕ್ಕೆ ತರಬೇತಿ, ಸಂಶೋಧನೆ ಮತ್ತು ಪಬ್ಲಿಕೇಶನ್ ಹಾಗೂ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಯೆನೆಪೊಯ ವಿಶ್ವವಿದ್ಯಾನಿಲಯವು ಸಲಹೆ ಹಾಗೂ ಸಹಕಾರವನ್ನು ನೀಡುವುದು ಈ ಒಡಂಬಡಿಕೆಯ ಮುಖ್ಯ ಉದ್ದೇಶವಾಗಿದೆ.

ಯೆನೆಪೊಯ ವಿಶ್ವವಿದ್ಯಾನಿಲಯದ ಸೆಂಟರ್ ಫಾರ್ ಎಥಿಕ್ಸ್ ಫೆಬ್ರವರಿ 2011ರಲ್ಲಿ ಸ್ಥಾಪನೆಗೊಂಡಿದೆ. ಎಥಿಕ್ಸ್ ಶಿಕ್ಷಣದ ವಿಷಯದಲ್ಲಿ ಸಂಶೋಧನೆ ಮತ್ತು ವಿವಿಧ ಶೈಕ್ಷಣಿಕ ಚಟುವಟಿಕೆಯಲ್ಲಿ ಕಾರ್ಯನಿರತವಾಗಿದ್ದು, ಭಾರತದ ವೈದ್ಯಕೀಯ ಕಾಲೇಜುಗಳಲ್ಲಿ ಮೊಟ್ಟ ಮೊದಲ ಎಥಿಕ್ಸ್ ಕೇಂದ್ರ ಎಂದು ಹೆಗ್ಗಳಿಕೆ ಪಡೆದಿದೆ. ವೈದ್ಯಕೀಯ ರಂಗದಲ್ಲಿ ಮೆಡಿಕಲ್ ಎಥಿಕ್ಸ್ ಮತ್ತು ಬಯೋ ಎಥಿಕ್ಸ್ ವಿಷಯಗಳನ್ನು ಅಳವಡಿಸಿ ಶೈಕ್ಷಣಿಕ ಕಾರ್ಯಕ್ರಮವನ್ನು, ಸಂಶೋಧನೆ ಮತ್ತು ಸಾಂಸ್ಕೃತಿಕ ವಿನಿಮಯ ಮಾಡುವ ಉದ್ದೇಶದಿಂದ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ.


ನಾರಾಯಣ ಡೆಂಟಲ್ ಕಾಲೇಜಿನ ಓರಲ್ ಮೆಡಿಸಿನ್ ಮತ್ತು ಮಾಕ್ಸಿಲೋ ಫೇಶಿಯಲ್ ಇಮೇಜಿಯೋಲೊಜಿಯ ಪ್ರೊಫೆಸರ್ ಮತ್ತು ವಿಭಾಗ ಮುಖ್ಯಸ್ಥ ಡಾ. ಕಣ್ಣನ್, ಯೆನೆಪೊಯ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್, ಡಾ. ಸಿ.ವಿ.ರಘುವೀರ್, ಸೆಂಟರ್ ಫಾರ್ ಎಥಿಕ್ಸ್‌ನ ನಿರ್ದೇಶಕಿ ಡಾ. ವೀಣಾ ವಾಸ್ವಾನಿ ಒಡಂಬಡಿಕೆಗೆ ಸಹಿ ಮಾಡಿದರು.

ಯೆನೆಪೊಯ ವಿಶ್ವವಿದ್ಯಾನಿಲಯದ ಅಡಿಶನಲ್ ರಿಜಿಸ್ಟ್ರಾರ್ ಡಾ. ಶ್ರೀಕುಮಾರ್ ನಾಯರ್, ಕಣ್ಣೂರು ಮತ್ತು ಕ್ಯಾಲಿಕಟ್ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಪ್ರೊಫೆಸರ್ ಅಬ್ದುರ್ರಹ್ಮಾನ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ATTESTED
Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN "VIJAYA KARNATAKA" DTD 17.06.2016

# ಯೇನೆಪೋಯ ವಿವಿ, ನೆಲ್ಲೂರಿನ ಡೆಂಟಲ್ ಕಾಲೇಜು ನಡುವೆ ಒಡಂಬಡಿಕೆ




■ ವಿಕ ಸುದ್ದಿಲೋಕ ತೊಕ್ಕೊಟ್ಟು

ಭಾರತೀಯ ವೈದ್ಯಕೀಯ ಕಾಲೇಜುಗಳಲ್ಲಿ ಮೊಟ್ಟಮೊದಲ ಎಥಿಕ್ಸ್ ಕೇಂದ್ರ ಎಂಬ ಹೆಗ್ಗಳಿಕೆ ಪಡೆದಿರುವ ಯೇನೆಪೋಯ ವಿವಿಯು ನೆಲ್ಲೂರಿನ ನಾರಾಯಣ ಡೆಂಟಲ್ ಹಾಗೂ ನರ್ಸಿಂಗ್ ಕಾಲೇಜು ಆಸ್ಪತ್ರೆಯಲ್ಲಿ ಎಥಿಕ್ಸ್ ಸೆಂಟರ್ ಸ್ಥಾಪನೆ, ಸಿಬ್ಬಂದಿಗಳಿಗೆ ತರಬೇತಿ, ಸಂಶೋಧನೆ, ಪಬ್ಲಿಕೇಶನ್, ಹೊಸ ಕೋರ್ಸುಗಳನ್ನು ಪ್ರಾರಂಭಿಸಲು ಸಲಹೆ ಹಾಗೂ ಸಹಕಾರ ನೀಡುವ ಒಡಂಬಡಿಕೆಗೆ ಮಾಡಿಕೊಂಡಿದೆ.

ದೇರಳಕಟ್ಟೆಯ ಯೇನೆಪೋಯ ವಿವಿಯ ಸೆಂಟರ್ ಫಾರ್ ಎಥಿಕ್ಸ್ ಹಾಗೂ ನೆಲ್ಲೂರಿನ ನಾರಾಯಣ ಡೆಂಟಲ್, ನರ್ಸಿಂಗ್ ಕಾಲೇಜು ಮತ್ತು ಆಸ್ಪತ್ರೆ ನಡುವೆ ಪರಸ್ಪರ ತಿಳಿವಳಿಕೆ ಒಪ್ಪಂದಕ್ಕೆ ಗುರುವಾರ ಯೇನೆಪೋಯ ವಿವಿಯಲ್ಲಿ ಯೇನೆಪೋಯ ವಿವಿ ಕುಲಸಚಿವ ಡಾ. ಸಿ.ವಿ. ರಘುವೀರ್, ನಾರಾಯಣ ಡೆಂಟಲ್ ಕಾಲೇಜಿನ ಓರಲ್ ಮೆಡಿಸಿನ್ ಮತ್ತು ಮಾಕ್ಸಿಲೋಫೇಶಿಯಲ್ ಇಮೇಜಿಯೋಲೊಜಿ ಪ್ರೊಫೆಸರ್ ಮತ್ತು ವಿಭಾಗ ಮುಖ್ಯಸ್ಥ ಡಾ. ಕಣ್ಣನ್, ಯೇನೆಪೋಯ ವಿವಿಯ ಸೆಂಟರ್ ಫಾರ್ ಎಥಿಕ್ಸ್‌ನ ನಿರ್ದೇಶಕಿ ಡಾ. ವೀಣಾ ವಾಸ್ವಾನಿ ಒಡಂಬಡಿಕೆಗೆ ಸಹಿ ಮಾಡಿದರು.

ಯೇನೆಪೋಯ ವಿವಿಯಲ್ಲಿ ಸೆಂಟರ್ ಫಾರ್ ಎಥಿಕ್ಸ್ ಐದು ವರ್ಷಗಳ ಹಿಂದೆ ಆರಂಭಗೊಂಡಿದ್ದು, ಎಥಿಕ್ಸ್ ಶಿಕ್ಷಣದ ವಿಷಯದಲ್ಲಿ ಸಂಶೋಧನೆ ಮತ್ತು ನಾನಾ ಶೈಕ್ಷಣಿಕ ಚಟುವಟಿಕೆಯಲ್ಲಿ ಕಾರ್ಯನಿರತವಾಗಿದೆ. ಭಾರತದ ವೈದ್ಯಕೀಯ ಕಾಲೇಜುಗಳಲ್ಲಿ ಮೊಟ್ಟಮೊದಲ ಎಥಿಕ್ಸ್ ಕೇಂದ್ರ ಎಂಬ ಹೆಗ್ಗಳಿಕೆ ಪಡೆದಿದೆ. ವೈದ್ಯಕೀಯ ರಂಗದಲ್ಲಿ ಮೆಡಿಕಲ್ ಎಥಿಕ್ಸ್ ಮತ್ತು ಬಯೋ ಎಥಿಕ್ಸ್ ವಿಷಯಗಳನ್ನು ಆಳವಡಿಸಿ ಶೈಕ್ಷಣಿಕ ಕಾರ್ಯಕ್ರಮವನ್ನು, ಸಂಶೋಧನೆ ಮತ್ತು ಸಾಂಸ್ಕೃತಿಕ ವಿನಿಮಯ ಮಾಡುವ ಉದ್ದೇಶದಿಂದ ಕೇಂದ್ರವನ್ನು ಸ್ಥಾಪಿಸಲಾಗಿದೆ. ಯೇನೆಪೋಯ ವಿವಿಯ ಹೆಚ್ಚುವರಿ ಕುಲಸಚಿವ ಡಾ. ಶ್ರೀಕುಮಾರ್ ನಾಯರ್, ಕಣ್ಣೂರು ಮತ್ತು ಕಲ್ಲಿಕೋಟೆ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಅಬ್ದುಲ್ ರಹಮಾನ್ ಉಪಸ್ಥಿತರಿದ್ದರು.

ATTESTED
Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN "THE HINDU" DTD 17.06.2016

# Yenepoya, Narayana institutions sign MoU on Bioethics Centre

MANGALURU: The Centre for Ethics, Yenepoya University, and Narayana Dental College and Hospital and Narayana Nursing College, Nellore, on Thursday signed a memorandum of understanding on the development of the Bioethics Centre at the latter.


Under the agreement, Yenepoya University will provide guidance and support for the development of the centre, with capacity-building training of the staff in the broader areas of bioethics, including research and publication, in Narayana dental and nursing institutions.

— Special Correspondent

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

APPEARED IN "UDAYAVANI" DTD 18.06.2016




# ಯೇನಪೊಯ ವಿ.ವಿ.: ತಿಳಿವಳಿಕೆ ಒಪ್ಪಂದ

ಉಳ್ಳಾಲ, ಜೂ. 17: ಯೇನಪೊಯ ವಿಶ್ವವಿದ್ಯಾನಿಲಯದ ಸೆಂಟರ್ ಫಾರ್ ಎಥಿಕ್ಸ್ ಹಾಗೂ ನೆಲ್ಲೂರಿನ ನಾರಾಯಣ ಡೆಂಟಲ್ ಕಾಲೇಜು ಮತ್ತು ಆಸ್ಪತ್ರೆ ಮತ್ತು ನಾರಾಯಣ ನರ್ಸಿಂಗ್ ಕಾಲೇಜು ನಡುವೆ ಪರಸ್ಪರ ತಿಳಿವಳಿಕೆ ಒಪ್ಪಂದಕ್ಕೆ ಯೇನಪೊಯ ಆಸ್ಪತ್ರೆಯಲ್ಲಿ ಜರಗಿದ ಕಾರ್ಯಕ್ರಮದಲ್ಲಿ ಸಹಿ ಮಾಡಲಾಯಿತು.

ನೆಲ್ಲೂರಿನ ನಾರಾಯಣ ಸಂಸ್ಥೆಯಲ್ಲಿ ಎಥಿಕ್ಸ್ ಸೆಂಟರ್ ಸ್ಥಾಪನೆ, ಅಲ್ಲಿಯ ಸಿಬಂದಿ ವರ್ಗಕ್ಕೆ ತರಬೇತಿ, ಸಂಶೋಧನೆ ಮತ್ತು ಪ್ರಕಟನೆ ಹಾಗೂ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಯೇನಪೊಯ ವಿಶ್ವವಿದ್ಯಾನಿಲಯ ಸಲಹೆ ಹಾಗೂ ಸಹಕಾರ ನೀಡುವುದು ಈ ಒಡಂಬಡಿಕೆಯ ಮುಖ್ಯ ಉದ್ದೇಶ.

ನಾರಾಯಣ ಡೆಂಟಲ್ ಕಾಲೇಜಿನ ಓರಲ್ ಮೆಡಿಸಿನ್ ಮತ್ತು ಮಾಕ್ಸಿಲೋ ಫೇಶಿಯಲ್ ಪ್ರಾಧ್ಯಾಪಕ ಮತ್ತು ವಿಭಾಗ ಮುಖ್ಯಸ್ಥ ಡಾ। ಕಣ್ಣನ್, ಯೇನಪೊಯ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಡಾ। ಸಿ.ವಿ. ರಘುವೀರ್, ಸೆಂಟರ್ ಫಾರ್ ಎಥಿಕ್ಸ್‌ನ ನಿರ್ದೇಶಕಿ ಡಾ। ವೀಣಾ ವಾಸ್ವಾನಿ ಅವರು ಈ ಒಡಂಬಡಿಕೆಗೆ ಸಹಿ ಮಾಡಿದರು.

ಯೇನಪೊಯ ವಿಶ್ವವಿದ್ಯಾನಿಲಯದ ಅಡಿಶನಲ್ ರಿಜಿಸ್ಟ್ರಾರ್ ಡಾ। ಶ್ರೀಕುಮಾರ್ ನಾಯರ್, ಕಣ್ಣೂರು ಮತ್ತು ಕ್ಯಾಲಿಕಟ್ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಪ್ರೊ। ಅಬ್ದುಲ್ ರಹಮಾನ್ ಉಪಸ್ಥಿತರಿದ್ದರು.

ATTESTED
Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.